
ಡಾ. ಆರ್. ಸಿ. ಹಿರೇಮಠ

ವ್ಯಕ್ತಿ ಪರಿಚಯ



ಡಾ. ಸಿ. ಕೆ. ನಾವಲಗಿ

ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೨೪

ಡಾ. ಆರ್. ಸಿ. ಹಿರೇಮಠ

ವ್ಯಕ್ತಿ ಪರಿಚಯ

ಡಾ. ಸಿ. ಕೆ. ನಾವಲಗಿ
'ಚಂಬೆಳಕು', ವಿದ್ಯಾನಗರ,
ಗೋಕಾಕ – 591 307, ಬೆಳಗಾವಿ ಜಿಲ್ಲೆ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಲೇ ಔಟ್,
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

DR. R. C. HIREMATHA
A pen portrait - by Dr. C.K. NAVALAGI.
Published by : KARNATAKA JANAPADA PARISHATH.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalore - 560 054.
Pages : 32 Price : Rs.10 2008.

ಪ್ರಥಮ ಮುದ್ರಣ ೨೦೦೮

ಪ್ರತಿಗಳು : ೨೦೦೦

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿ)

ಮುದ್ರಕರು ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು – 560 030
ಮೊಬೈಲ್ – 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಪ್ರಸಿದ್ಧ ವಿದ್ವಾಂಸರಾದ **ಡಾ. ಸಿ. ಕೆ. ನಾವಲಗಿ** ಅವರು **ಡಾ. ಆರ್. ಸಿ. ಹಿರೇಮಠ** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೧೬-೦೬-೨೦೦೮

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಡಾ. ಆರ್. ಸಿ. ಹಿರೇಮಠ

ಬಾಲ್ಯ-ಶಿಕ್ಷಣ-ಉದ್ಯೋಗ

ಡಾ. ಆರ್.ಸಿ. ಹಿರೇಮಠ ಅವರು ಕನ್ನಡನಾಡಿನ ಬಹುಮುಖ್ಯ ವಿದ್ವಾಂಸರಲ್ಲೊಬ್ಬರು. ಭಾಷೆ, ಸಾಹಿತ್ಯ, ಶಾಸ್ತ್ರ, ಧರ್ಮ, ಸಂಸ್ಕೃತಿ, ಕಲೆ, ಜನಪದ.... ಇತ್ಯಾದಿ ಕ್ಷೇತ್ರಗಳಲ್ಲಿ ತಮ್ಮತನವನ್ನು ಹೊರಸೂಸಿದ ಅಪರೂಪದ ವಿದ್ವಾಂಸರು. ಪೂರ್ವಸಿದ್ಧತೆಯಿಲ್ಲದಿದ್ದರೂ ಯಾವುದೇ ವಿಷಯದ ಮೇಲೆ ಗಂಟೆಗಟ್ಟಲೇ ಮಾತನಾಡುವ ಪಂಡಿತರು. ಅವರ ಎಲ್ಲ ವಿದ್ವತ್ತು ಪ್ರಕಟವಾಗಿಲ್ಲವೆಂದು ಅವರ ಆತ್ಮೀಯ ಒಡನಾಡಿ ಡಾ। ಎಂ.ಎಂ. ಕಲಬುರ್ಗಿ ಅವರು ಹೇಳುವಲ್ಲಿ ಅರ್ಥವಿದೆ. ಡಾ। ಆರ್.ಸಿ. ಹಿರೇಮಠ ಅವರು ವಿದ್ವಾಂಸರಾಗಿ ಕನ್ನಡ ವಿದ್ವತ್ ಲೋಕವನ್ನು ವಿಸ್ತರಿಸಿದರು. ಕುಲಪತಿಗಳಾಗಿ ಕರ್ನಾಟಕ ವಿಶ್ವವಿದ್ಯಾಲಯವನ್ನು ಸರ್ವಾಂಗಸುಂದರಗೊಳಿಸಿ ಮುನ್ನಡೆಸಿದರು. ಪ್ರಾಧ್ಯಾಪಕರಾಗಿ ಕ.ವಿ.ವಿ.ಯಲ್ಲಿ ಕನ್ನಡ ಅಧ್ಯಯನ ಪೀಠವನ್ನು ಕಟ್ಟಿ ಬೆಳೆಸಿದರು. ಕನ್ನಡ ವಿಭಾಗ ಅಥವಾ ಕನ್ನಡ ಅಧ್ಯಯನ ಪೀಠದ ಮೂಲಕ ಕನ್ನಡ ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಪರಂಪರೆ, ಜಾನಪದ ಅಧ್ಯಯನಗಳಿಗೆ ನಾಂದಿ ಹಾಡಿದರು. ಕನ್ನಡ ಪರಂಪರೆಯ ನಿರ್ಮಾಪಕರಾದ ಆರ್.ಸಿ. ಹಿರೇಮಠರಂಥ ಧೀಮಂತ ವ್ಯಕ್ತಿಯ ಬದುಕು ಬರೆವಣಿಗೆಗೆ ಅಷ್ಟು ಸುಲಭವಾಗಿ ಸಿಲುಕುವಂಥದಲ್ಲ! ಅವರ ಬದುಕು ಬರೆವಣಿಗೆಗಿಂತ ದೊಡ್ಡದು.

ಇವರ ಪೂರ್ಣ ಹೆಸರು ರುದ್ರಯ್ಯ ಚಂದ್ರಯ್ಯ ಹಿರೇಮಠ. ಆರ್.ಸಿ. ಹಿರೇಮಠರೆಂದೇ ಕನ್ನಡ ನಾಡಿನಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ಆತ್ಮೀಯರು ಆರ್.ಸಿ.ಯವರೆಂದೇ ಕರೆದರೆ, ವಿಶ್ವವಿದ್ಯಾನಿಲಯದ ಸಿಬ್ಬಂದಿ 'ಹಿರೇಮಠ ಸಾಹೇಬ' ರೆಂದೇ ಕರೆಯುತ್ತಿದ್ದರು. ಚಂದ್ರಯ್ಯ ಮತ್ತು

ವೀರಮ್ಮನವರ ಎರಡನೆಯ ಮಗುವಾಗಿ ಜನಿಸಿದವರೇ ರುದ್ರಯ್ಯನವರು (ಆರ್.ಸಿ. ಹಿರೇಮಠ). ರೋಣ ತಾಲ್ಲೂಕಿನ ಕುರುಡಗಿಯಲ್ಲಿ 1920 ಜನವರಿ 15 ರಂದು ಹುಟ್ಟಿದರು. ಆರ್.ಸಿ. ಹಿರೆಮಠರಿಗಿನ್ನೂ ಸರಿಯಾಗಿ ಹತ್ತು ವರುಷ ತುಂಬಿರಲಿಲ್ಲ. ಬದುಕಿನ ಹೋರಾಟ ಸುರುವಾಯಿತು. ಕಿತ್ತು ತಿನ್ನುವ ಬಡತನದ ಸಂದರ್ಭದಲ್ಲಿ ಹಸಿವನ್ನು ನೀಗಿಸಲು ಕುಟುಂಬವನ್ನು ಸಲುಹಲು ರುದ್ರಯ್ಯನವರು ಕುರುಡಗಿ, ಗುಜಮಾಗಡಿ, ಕಿರಟಗೇರಿ, ಹುಯಿಲಗೋಳ ಗ್ರಾಮಗಳಲ್ಲಿ ಧರ್ಮಕೋರಾನ್ನ ಮಾಡತೊಡಗಿದರು. ಇದರಿಂದ ಉಪಜೀವನ ನಿರ್ವಹಿಸುತ್ತಲೇ ಓದನ್ನು ಮುಂದುವರಿಸಿದರು. ಆಗಾಗ್ಗೆ ಹೊಲಗದ್ದೆಗಳಿಗೂ ದುಡಿಯಲು ಹೋಗುತ್ತಿದ್ದರು. ಸರಿಯಾಗಿ ಶಾಲೆಗೆ ಹೋಗಲಾಗಲಿಲ್ಲ. ಆದರೂ ಶಾಲಾ ಅಭ್ಯಾಸದಲ್ಲಿ ಮುಂದಿದ್ದರು. ಅಗಾಧವಾದ ಸ್ಮರಣಶಕ್ತಿ ಮತ್ತು ವಿಚಾರ ಶಕ್ತಿಯನ್ನು ಬಾಲ್ಯದಲ್ಲಿಯೇ ಹೊಂದಿದ್ದರು. ಗಣಿತ ಮತ್ತು ಕನ್ನಡ ವಿಷಯದಲ್ಲಿ ತುಂಬ ಆಸ್ತಕಿಯನ್ನೂ ಹೊಂದಿದ್ದರು. ತಮ್ಮ ಬುದ್ಧಿಸಾಮರ್ಥ್ಯದಿಂದ, ಸರಳ ನಡೆನುಡಿಯಿಂದ ಶಾಲಾ ಶಿಕ್ಷಕರ ಪ್ರೀತಿಗೆ ಪಾತ್ರರಾಗಿದ್ದರು.

ಹಿರೇಮಠ ಅವರು ಹೇಗೇಗೋ ತಮ್ಮ ಪೂರ್ವ ಪ್ರಾರ್ಥಮಿಕ ಶಿಕ್ಷಣವನ್ನು ಕುರಡಗಿಯಲ್ಲಿ ಮುಗಿಸಿ, ಗದಗಿನ ಬಂಗಾರಶೆಟ್ಟರ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಮಾಡುತ್ತಲೇ ಪ್ರಾಥಮಿಕ ಶಾಲೆಯ ಎರಡು ವರುಷಗಳ ವಿದ್ಯಾಭ್ಯಾಸ ಪೂರೈಸಿದರು. ಈತನ ಮೇಲೆ ಮನೆತನದ ಜವಾಬ್ದಾರಿ ಇರುವುದರಿಂದ, ಗದಗಿನ ಶಿರಹಟ್ಟಿ ಫಕೀರಸ್ವಾಮಿಗಳ ಮಠದಲ್ಲಿ ಪುಟ್ಟಮನೆಯೊದನ್ನು ಬಾಡಿಗೆಗೆ ಹಿಡಿದು ತನ್ನ ಮನೆಯ ಪರಿವಾರವನ್ನು ಕರೆಸಿಕೊಂಡು ಜೀವನ ಸಾಗಿಸಿದ ದಿಟ್ಟ ಬಾಲಕ. ತಂದೆ ತೀರಿಹೋದರು. ಅವರಿವರಿಂದ ಭಿಕ್ಷೆ ಎತ್ತಿ ಅವರ ಶವಸಂಸ್ಕಾರ ಮಾಡಿದ ರುದ್ರಯ್ಯ. ಚಂದ್ರಯ್ಯನವರ ಸಾವಿನಿಂದ ಅತ್ತು ಅತ್ತು ವೀರಮ್ಮ ಕಣ್ಣು ಕಳೆದುಕೊಂಡರು. ರುದ್ರಯ್ಯನಿಗೆ ದುಃಖದ ಕಟ್ಟೊಡೆಯಿತಾದರೂ ಸಾವರಿಸಿಕೊಂಡು ಮುನ್ನಡೆದರು.

ಕಣ್ಣಿಲ್ಲದ ತಾಯಿ, ಒಬ್ಬ ತಂಗಿ, ಒಬ್ಬ ತಮ್ಮ ಇವರ ಭಾರಹೊತ್ತು ರುದ್ರಯ್ಯ ಧರ್ಮಕೋರಾನ್ನ ಮಾಡುತ್ತ, ಪೆಟ್ರೋಲ್ ಬಂಕ್‌ನಲ್ಲಿ ಕೆಲಸಮಾಡುತ್ತ ಓದನ್ನು ಮುಂದುವರೆಸಿದರು. 1934ರಲ್ಲಿ ಮುಲ್ಕಿ ಪರೀಕ್ಷೆಯಲ್ಲಿ ಧಾರವಾಡ ಜಿಲ್ಲೆಗೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾದರು. ಇವರಿಗೆ ಸಹಾಯ ನೀಡಿದ-ಕಲಿಸಿದ ಪ್ರಾಥಮಿಕ ಶಾಲಾ ಶಿಕ್ಷಕರಾದ ಸಿದ್ಧರಾಮಶೆಟ್ಟರು ಮತ್ತು ಕ.ಬ. ಅಂಗಡಿ ಶಿಕ್ಷಕರಿಗೆ ಎಲ್ಲಿಲ್ಲದ ಸಂತಸವಾಯಿತು. ರುದ್ರಯ್ಯ ಕೆಮಿಕಲ್ ವರ್ಕ್ಸನಲ್ಲಿ ಕೆಲಸ ಮಾಡುತ್ತ ಗದಗದಲ್ಲಿ ಹೈಸ್ಕೂಲ್ ಶಿಕ್ಷಣ ಮುಂದುವರಿಸಿದರು. ಈ ಶಿಕ್ಷಣ ಕೊನೆಯ ಹಂತಕ್ಕೆ ಬರುವಷ್ಟರಲ್ಲಿ ಗದುಗಿನ ತೋಂಟದಾರ್ಯ ಮಠದ ಫ್ರೀ ಬೋರ್ಡಿಂಗ್‌ನಲ್ಲಿ ಪ್ರವೇಶ ದೊರಕಿ, ಇವರ ಎರಡು ಹೊತ್ತಿನ ಊಟದ ಸಮಸ್ಯೆ ನಿವಾರಣೆಯಾಯಿತು. ಗದುಗಿನ ಮುನ್ಸಿಪಲ್ ಹೈಸ್ಕೂಲಿನಲ್ಲಿ ಮ್ಯಾಟ್ರಿಕ್ ಪರೀಕ್ಷೆ (1939) ಯನ್ನು ಪ್ರಥಮ ಸ್ಥಾನ ಗಿಟ್ಟಿಸಿಕೊಳ್ಳುವ ಮೂಲಕ ಪೂರೈಸಿದರು. ಮುಂದೆ ವಾರಾನ್ನ ಮಾಡಿಕೊಂಡೇ ಧಾರವಾಡ ಕರ್ನಾಟಕ ಕಾಲೇಜಿನ ವಿದ್ಯಾರ್ಥಿಯಾದರು. ಆರ್.ಸಿ. ಹಿರೇಮಠ ಅವರ ಬುದ್ಧಿಕೌಶಲಕ್ಕೆ ಮೆಚ್ಚಿದ ಡಾ| ಎಸ್.ಸಿ. ನಂದೀಮಠರು ಅವರನ್ನು ಬೆಳಗಾವಿಯ ಲಿಂಗರಾಜ ಕಾಲೇಜಿಗೆ ಕರೆತಂದರು. ಕಾಲೇಜಿನ ಫೀ ಮಾಫಿಯಾಯಿತು. ಪ್ರಸಾದ ನಿಲಯದಲ್ಲಿ ಉಚಿತ ಪ್ರಸಾದ ವ್ಯವಸ್ಥೆಯಾಯಿತು. ಹಿರೇಮಠ ಅವರ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗಿತು. ಇಲ್ಲಿ ಬಿ.ಎ. ಪರೀಕ್ಷೆಯನ್ನು ಪ್ರಶಸ್ತಿ ಸಹಿತ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾದರು. ಕನ್ನಡವನ್ನು ಪ್ರಧಾನ ವಿಷಯವಾಗಿ ಅಭ್ಯಸಿಸಿ ಮುಂಬಯಿ ವಿಶ್ವವಿದ್ಯಾಲಯದ ಬಿ.ಎ. ಪರೀಕ್ಷೆಯಲ್ಲಿ ಇಂಥ ಅಭೂತಪೂರ್ವ ಯಶಸ್ಸನ್ನು ಪಡೆದವರಲ್ಲಿ ಆರ್.ಸಿ. ಹಿರೇಠರೇ ಮೊದಲಿಗರು. ಕನ್ನಡ ಇಂಗ್ಲಿಷ್, ಸಂಸ್ಕೃತ ಸಾಹಿತ್ಯವನ್ನೆಲ್ಲ ಲಿಂಗರಾಜನಲ್ಲಿರುವಾಗಲೇ ಸಾಕಷ್ಟು ಓದಿ ತಿಳಿದುಕೊಂಡರು. ಲಿಂಗರಾಜರ ಕಾಲೇಜಿನ ಪ್ರಥಮ ಫೆಲೋ ಆಗಿ 1945ರಲ್ಲಿ ಎಂ.ಎ. ಪದವಿಯನ್ನು ಉನ್ನತ ದರ್ಜೆಯಲ್ಲಿ ಮುಂಬೈ ವಿವಿ ದಿಂದ ಪಾಸುಮಾಡಿಕೊಂಡರು. ನಂದೀಮಠರ ನೆರವಿನಿಂದ ಬಾಗಲಕೋಟೆ

ಬಸವೇಶ್ವರ ಕಾಲೇಜಿನ ಪ್ರಥಮ ಕನ್ನಡ ಪ್ರಾಧ್ಯಾಪಕರೂ ಮುಖ್ಯಸ್ಥರೂ ಆದರು.

ಬೆಳಗಾವಿ ಜಿಲ್ಲೆಯ ತುರಮರಿಯ ಪುರಮಠಾಧೀಶರೆನಿಸಿದ ದೊಡ್ಡಮನೆತನದ ಶ್ರೀಮತಿ ಸುಮತಿದೇವಿಯರನ್ನು 1948ರಲ್ಲಿ ಹಿರೇಮಠ ಅವರು ಧರ್ಮಪತ್ನಿಯಾಗಿ ಸ್ವೀಕರಿಸಿದರು. ಇವರ ಆಗಮನದಿಂದ ಆರ್.ಸಿ. ಅವರ ಕಷ್ಟಗಳು ಕಡಿಮೆಯಾದವು. ಅವರು ತಮ್ಮ ಸಾಹಿತ್ಯಕ ಕಾರ್ಯವನ್ನು ನಿರಾತಂಕವಾಗಿ ಕೈಗೊಂಡರು, ಅದ್ಭುತ ಸಾಧನೆ ಮಾಡಿದರು. 1951ರಲ್ಲಿ ಆರ್.ಸಿ. ಹಿರೇಮಠರು ಕ.ವಿ.ವಿ. ಕನ್ನಡ ವಿಭಾಗಕ್ಕೆ ರೀಡರ್ ಆಗಿ ಸೇರಿದರು. ಪ್ರಾಧ್ಯಾಪಕರಾಗಿ ತೀ.ನಂ.ಶ್ರೀಕಂಠಯ್ಯನವರೂ ಬಂದರು. 1957ರಲ್ಲಿ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾದರು. ನಂದೀಮಠರ ಮಾರ್ಗದರ್ಶನದಲ್ಲೆ ಭಾಷಾ ವಿಜ್ಞಾನದಲ್ಲಿ ಡಾಕ್ಟರೇಟ್ ಪದವಿ ಪಡೆದರು (ಲಿಂಗ್ವಿಸ್ಟಿಕ್ ಇನ್‌ವೆಸ್ಟಿಗೇಶನ್ ಆಫ್ ಸಮ್ ಪ್ರಾಬ್ಲಮ್ ಆನ್ ದಿ ರಿಲೇಶನ್‌ಷಿಪ್ ಆಫ್ ಇಂಡೋ ಆರ್ಯನ್ ಅಂಡ್ ದ್ರವಿಡಿಯನ್ ಲ್ಯಾಂಗ್ವೇಜಸ್ –1955). ಅಧ್ಯಯನ ಅಧ್ಯಾಪನ–ಸಂಶೋಧನ–ಪ್ರಕಟಣೆಗಳಲ್ಲಿ ಹಗಲಿರುಳೆನ್ನದೆ ದುಡಿದೆ ದುಡಿದರು. 1974ರಿಂದ 1978ರವರೆಗೆ ಧಾರವಾಡ ಕ.ವಿ.ವಿ. ಕುಲಪತಿಗಳಾದರು. ಇದು ಅವರ ದುಡಿಮೆ ಮತ್ತು ಪಾಂಡಿತ್ಯ ಪೂರ್ಣವ್ಯಕ್ತಿತ್ವಕ್ಕೆ ದೊರೆತ ಗೌರವ. ಭಾಷಾ ವಿಜ್ಞಾನದ ಪ್ರಾಧ್ಯಾಪಕರಾಗಿ ಅಮೇರಿಕೆಗೆ ಹೋಗಿಬಂದರು (1965). ವಾಲ್ಟೇರ್‌ನಲ್ಲಿ ನಡೆದ ಅಖಿಲಭಾರತ ದ್ರಾವಿಡ ಭಾಷೆ ಸಮ್ಮೇಳನದ ಅಧ್ಯಕ್ಷರಾಗಿದ್ದರು (1976). ತ್ರಿವೇಂಡ್ರಂನಲ್ಲಿ ನಡೆದ ಅಂತರಾಷ್ಟ್ರೀಯ ದ್ರಾವಿಡ ಭಾಷಾ ಸಮ್ಮೇಳನದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದರು (1979). ಭಾಷಾ ವಿಜ್ಞಾನದ ವಿಷಯದಲ್ಲಿ ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಖ್ಯಾತಿಯನ್ನು ಪಡೆದರು. ಮೂಲತಃ ಕನ್ನಡ ಪ್ರಾಧ್ಯಾಪಕರಾದ ಅವರು 'ರಾಷ್ಟ್ರೀಯ ಪ್ರಾಧ್ಯಾಪಕರಾದರು (1978). 1998 ನವೆಂಬರ್ 3 ರಂದು ನಿಧನರಾದರು.

ವೃತ್ತಿ ಜೀವನ ಸಾಧನೆ :

ಡಾ। ಆರ್.ಸಿ.ಹಿರೇಮಠ ಅವರು ವಿದ್ಯಾರ್ಥಿ ದೆಸೆಯಲ್ಲಿಯೇ ಕನ್ನಡದ ರಕ್ತವನ್ನು ಧಮನಿಧಮನಿಗಳಲ್ಲಿ ತುಂಬಿಕೊಂಡು, ಎಲ್ಲ ತರಗತಿಗಳ ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನ ಪಡೆದು, ತಮ್ಮ ಪ್ರತಿಭೆಯನ್ನು ಮೆರೆಯುತ್ತಲೇ ಕನ್ನಡದ ಪ್ರಾಧ್ಯಾಪಕರಾಗಿ, ವಿಭಾಗ ಮುಖ್ಯಸ್ಥರಾಗಿ, ಕುಪತಿಗಳಾಗಿ, ರಾಷ್ಟ್ರೀಯ-ಅಂತರಾಷ್ಟ್ರೀಯ ಶೈಕ್ಷಣಿಕ ತಿಳುವಳಿಕೆಗಳ ಮೂಲಕ ಜ್ಞಾನದ ಕ್ಷಿತಿಜವನ್ನು ವಿಸ್ತರಿಸಿಕೊಳ್ಳುತ್ತಲೇ ಕನ್ನಡದ ಶಕ್ತಿ-ಸಾಮರ್ಥ್ಯವನ್ನು ವೃದ್ಧಿಸುತ್ತಲೇ ಬಂದವರು.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಆರ್.ಸಿ. ಹಿರೇಮಠರು ತಮ್ಮ ಸಹೋದ್ಯೋಗಿ ಮಿತ್ರರಾದ ಡಾ। ಎಂ.ಎಸ್. ಸುಂಕಾಪುರ, ಡಾ। ಎಸ್.ಎಂ. ವೃಷಭೇಂದ್ರಸ್ವಾಮಿ, ಡಾ। ಜೆ.ಎಸ್. ಕುಳ್ಳಿ, ಡಾ। ಎಸ್.ಎಸ್. ಮಾಳವಾಡ, ಡಾ। ಎಂ.ಎಂ. ಕಲಬುರ್ಗಿ ಮುಂತಾದವರ ನೆರವಿನಿಂದ, ತಮ್ಮ ಸ್ವಸಾಮರ್ಥ್ಯ ಮತ್ತು ಕನ್ನಡದ ಮೇಲಿನ ಅಪರಿಮಿತ ಪ್ರೀತಿಯಿಂದ ಹಲವಾರು ಸಾಧನೆಗಳನ್ನು ಮಾಡಿದ ಸಾಹಸಿಗರು. ಭಾಷಾ ವಿಜ್ಞಾನಕೋರ್ಸ್, ಜೈನ ವೀರಶೈವ-ಬ್ರಾಹ್ಮಣ ಸಾಹಿತ್ಯ ಶಾಖೆ, ಸೃಷ್ಟಿಸಿದರು. ಗ್ರಂಥಸಂಪಾದನ ಶಾಸ್ತ್ರ-ಶಾಸನಶಾಸ್ತ್ರ, ಪಿಎಚ್.ಡಿ, ಮಾರ್ಗದರ್ಶನ ಪ್ರಾರಂಭಿಸಿದರು. ಭಾಷಾಂತರ, ಭಾಷಾಶಾಸ್ತ್ರ, ತಮಿಳು, ತತ್ವಜ್ಞಾನ, ಡಿಪ್ಲೊಮಾ ಕೋರ್ಸ್‌ಗಳನ್ನು, ಕನ್ನಡೇತರ ಪದವೀಧರರಿಗಾಗಿ ಕನ್ನಡ ಸರ್ಟಿಫಿಕೇಟ್ ಕೋರ್ಸ್ (ಬಿ.ಲಿಟ್,ಎಂ.ಲಿಟ್) ಗಳನ್ನು ತೆರೆದರು. ಅಲ್ಲದೆ, ಬಸವೇಶ್ವರ ಪೀಠ, ಸಂಸ್ಕೃತ-ತಮಿಳು-ಹಿಂದಿ ಅಭ್ಯಾಸಗಳ ಮೂಲಕ ಕನ್ನಡ ಬೆಳೆಸಲು ಉಪಕ್ರಮ ಹಾಕಿದರು. ತಮಿಳು ಡಿಪ್ಲೊಮೊ ಸರ್ಟಿಫಿಕೇಟ್ ಕೋರ್ಸ್ ಮತ್ತು ತೌಲನಿಕ ಅಧ್ಯಯನಕ್ಕೆ ಅನುಕೂಲಿಸಿದರು. ಕ.ವಿ.ವಿ. ಮರಾಠಿ ವಿಭಾಗ, ಮುಂಬಯಿ ವಿ.ವಿ. ಕನ್ನಡ ವಿಭಾಗ ಪ್ರಾರಂಭವಾಗುವಂತೆ ಮಾಡಿದರು. ವಚನಸಾಹಿತ್ಯ ಪ್ರಕಟನ ಯೋಜನೆ, ಪಠ್ಯ ಪುಸ್ತಕ ನಿರ್ದೇಶನಾಲಯ, ಗ್ರಂಥ ಪ್ರಕಟಣೆ,

ಗ್ರಂಥಾಲಯ, ಹಸ್ತಪ್ರತಿಭಂಡಾರ, ಭಾಷಾ ಪ್ರಯೋಗಶಾಲೆ, ಪ್ರದರ್ಶನಾಲಯ, ಉಪನ್ಯಾಸ ಮಾಲೆ ಇತ್ಯಾದಿಗಳನ್ನು ಕನ್ನಡ ವಿಭಾಗದಲ್ಲಿ ಪ್ರಾರಂಭಿಸಿದರು. ಇವರ ಅಧಿಕಾರಾವಧಿಯಲ್ಲಿಯೇ ಕರ್ನಾಟಕ ಭಾರತಿ, ಮಾನವಿಕ ಭಾರತಿ, ವಿಜ್ಞಾನ ಭಾರತಿ, ವಿದ್ಯಾರ್ಥಿ ಭಾರತಿ ಮುಂತಾದ ಪತ್ರಿಕೆಗಳು ಕಣ್ಣುತೆರೆದವು.

ಕವಿ ಹೃದಯದ ಹಿರೇಮಠ ಅವರು 'ಸುಮಾಂಜಲಿ' (1948), ಮೌನಸ್ಪಂದನ (1961) ಎಂಬ ಎರಡು ಕವನ ಸಂಕಲನಗಳನ್ನು ಹೊರತಂದಿದ್ದಾರೆ. ಇವರ ಪ್ರಮುಖ ಆಸಕ್ತಿಯ ಕ್ಷೇತ್ರ ಸಂಪಾದನೆ ಮತ್ತು ಸಂಶೋಧನೆ. ಹೀಗಾಗಿ ಪ್ರಾಚೀನ ಕಾವ್ಯ, ವಚನ ಸಾಹಿತ್ಯ, ವ್ಯಾಕರಣ, ಭಾಷಾ ಶಾಸ್ತ್ರ, ಜನಪದ ಸಾಹಿತ್ಯ ಮುಂತಾದ ವಿಷಯಗಳಲ್ಲಿ ಅಮೂಲ್ಯ ಕೃತಿಗಳನ್ನು ಸಂಗ್ರಹಿಸಿ ಸಂಪಾದಿಸಿದ್ದಾರೆ; ಅಪೂರ್ವ ಪ್ರಸ್ತಾವನೆಗಳನ್ನು ಬರೆದಿದ್ದಾರೆ. ಬಸವಪುರಾಣ, ಬಸವಣ್ಣನವರ ವಚನಗಳು ಚನ್ನಬಸವಣ್ಣನವರ ವಚನಗಳು, ಸಿದ್ಧರಾಮೇಶ್ವರ ವಚನಗಳು, ಕೈವಲ್ಯದರ್ಪಣ, ಪದ್ಮರಾಜ ಪುರಾಣ, ಸೋಮನಾಥ ಚಾರಿತ್ರ್ಯ, ಮೋಹನ ತರಂಗಿಣಿ, ಪುರಾತನ ರಗಳೆಗಳು ಇತ್ಯಾದಿ ಹಲವಾರು ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. 'ಸಾಹಿತ್ಯ ಸಂತುಷ್ಟಿ', ಕವಿ ಪದ್ಮಣಾಂಕ, ಷಟ್‌ಸ್ಥಲಪ್ರಭೆ, ಮಹಾಕವಿ ರಾಘವಾಂಕ, ಎಂಬ ವಿಮರ್ಶನ ಸಂಶೋಧನ ಗ್ರಂಥಗಳನ್ನು ಹೊರತಂದಿದ್ದಾರೆ. ಶೂನ್ಯ ಸಂಪಾದನೆ, ಶ್ರೀ ಚನ್ನಬಸವೇಶ್ವರ ಎಂಬ ಕೃತಿಗಳನ್ನು ಇಂಗ್ಲೀಷಿನಲ್ಲಿಯೂ ಪ್ರಕಟಿಸಿ, ಭಾಷಾಂತರ ಕ್ಷೇತ್ರದಲ್ಲಿಯೂ ತಮ್ಮ ಪಾಂಡಿತ್ಯವನ್ನು ತೋರಿದ್ದಾರೆ. 'ಬುದ್ಧ' ನನ್ನು ಕುರಿತು ಮಹಾಕಾವ್ಯವನ್ನು ಬರೆದಿದ್ದಾರೆ; ಉರಿಬರಲಿ ಸಿರಿಬರಲಿ ಎನ್ನುವ ಆತ್ಮಕಥನವನ್ನು ಬರೆದುಕೊಂಡಿದ್ದಾರೆ. ಆದರೆ ಪ್ರಾಮುಖ್ಯವಾಗಿ ಆರ್.ಸಿ.ಅವರು ಸಂಪಾದಕರಾಗಿ ಸಂಶೋಧಕರಾಗಿ ಉತ್ತುಂಗಕ್ಕೆರಿದವರು. ಅದರಲ್ಲಿಯೂ 'ವಚನಸಂಪಾದನೆಯ ಯುಗಪ್ರವರ್ತಕ'ರೆನಿಸಿಕೊಂಡವರು. ಇದೆಲ್ಲ ಡಾ।ಆರ್.ಸಿ.ಹಿರೇಮಠರು ಕನ್ನಡ ಅಧ್ಯಯನ ಸಂಸ್ಥೆಯ

ನಿರ್ದೇಶಕರಾಗಿ, ಪ್ರಾಧ್ಯಾಪಕರಾಗಿ, ಸಂಶೋಧಕರಾಗಿ, ಕ.ವಿ.ವಿ. ಕುಲಪತಿಗಳಾಗಿ ಸಾಧಿಸಿದ ಸಾಧನೆಗಳ ಕಿರುನೋಟವಷ್ಟೇ!

ಕೌಟುಂಬಿಕ ಹಾಗೂ ಗ್ರಾಮೀಣ ಪರಿಸರ ಪ್ರಭಾವ

ಕನ್ನಡದ ವಿದ್ವಾಂಸ–ಪ್ರಾಧಾಪಕರಾದ ಡಾ। ಆರ್.ಸಿ. ಹಿರೇಮಠ ಅವರು ಯಾವಾಗಲೂ ಕೋಟು–ಪ್ಯಾಂಟು–ಟೈ ಧರಿಸುತ್ತಿದ್ದರು. (ಆಗಾಗ್ಗೆ ಧೋತಿ–ಕೂಡ ಉಡುತ್ತಿದ್ದರು). ಧಾರವಾಡ ಕನ್ನಡವನ್ನು ಮಾತನಾಡುತ್ತಿದ್ದರಾದರೂ ಜನಪದ ಇಂಗ್ಲಿಷ್ ಪದಗಳನ್ನು ಧಾರಾಳವಾಗಿ ಬಳಸುತ್ತಿದ್ದರು. ಒಂದು ರೀತಿಯಲ್ಲಿ ಅವರದು ಜನಪದ ಕನ್ನಡಾಂಗ್ಲ ಮಿಶ್ರಿತ ಮಾತುಗಾರಿಕೆ. ಜನಪದರಷ್ಟೇ ವಿಶಾಲ ಮನಸ್ಸುಳ್ಳವರು. ಅಂತರಂಗ–ಬಹಿರಂಗಗಳಲ್ಲಿ ಒಂದಾದ ಜನಪದ ನಗು ಚಿಮ್ಮಿಸುವವರು. ನಗುವಿನಲ್ಲಿ ತಿಂಗಳ ಬೆಳಕು ಸೂಸುವವರು. ಅಳುವನ್ನು ಗೆದ್ದು ಬಂದ ಮಂದಸ್ಮಿತರು. ಕೋಪ ತುಂಬ ಕಡಿಮೆ; ಒಮ್ಮೊಮ್ಮೆ ಬಂತೆಂದರೆ ಅಗ್ನಿಕುಂಡ. ಅದು ಬೇಗ ಆರುವಂಥದು.

ಇವರಿಗೆ ನಾಲ್ಕು ಜನ ಮಕ್ಕಳು. ಇಬರು ಹೆಣ್ಣು ಮಕ್ಕಳು. ಹಿರಿಯ ಮಗಳು 'ಶಶಿಕಲಾ' ಎಂ.ಡಿ. ಮುಗಿಸಿದ ಪ್ರತಿಭಾವಂತ ಡಾಕ್ಟರು. ಗ್ರಾಮೀಣ ಮಹಿಳೆಯಂಥ ಸಾದಾಸೀದಾ ಜೀವನ ಇವರದು. ಎರಡನೆಯವಳು 'ವಿಜಯಾ' ಗೃಹಿಣಿ. ಎಂ.ಬೀ. ಪರೀಕ್ಷೆಯಲ್ಲಿ ಗಣಿತ ವಿಷಯದಲ್ಲಿ 2ನೇ ರ್‍ಯಾಂಕ್ ವಿಜೇತೆ. ಸಂಗೀತ–ಚಿತ್ರಕಲೆಗಳಲ್ಲಿ ಪರಿಣತಿ ಪಡೆದವಳು. ಜಾನಪದ ಸಂಗೀತ–ಚಿತ್ರಕಲೆಗಳಲ್ಲಿಯೂ ಆಸಕ್ತಿ ಇರುವಂಥವಳು.

ಗಂಡು ಮಕ್ಕಳಲ್ಲಿ 'ರಾಜೀವ' ಮೊದಲನೆಯವ. 'ಜಯದೇವ' ಕೊನೆಯವ. ಸುಸಂಸ್ಕೃತರು. ಧರ್ಮಪತ್ನಿ ಸುಮತಿ ದೇವಿ ಸಾಕ್ಷಾತ್ ಗೃಹಲಕ್ಷ್ಮಿ. ಇವರೆಲ್ಲರಿಂದ ಆರ್.ಸಿ. ಅವರ ಮನೆಯಲ್ಲಿ ಜಾನಪದ ವಾತಾವರಣವೂ ನೆಲೆಸಿತ್ತು.

1950ರ ಸುಮಾರಿನಲ್ಲಿ ಅವರ ಹುಟ್ಟೂರು ಮತ್ತು ಸುತ್ತಲಿನ ಹಳ್ಳಿಗಳಲ್ಲಿ ಭಜನೆ, ಬಯಲಾಟ, ಗೊಂಬೆಯಾಟ, ಕಿಳ್ಳೀಕೇತರ ಆಟ ಮೊದಲಾದ ಪ್ರದರ್ಶನಗಳಾಗುತ್ತಿದ್ದವು. ಇವುಗಳನ್ನು ಊರಿನ ಬಾಲಕರೊಂದಿಗೆ ಆರ್.ಸಿ. ಅವರು ಮೇಲಿಂದ ಮೇಲೆ ನೋಡುತ್ತಿದ್ದರು. ಜನಪದ ಕಲೆಗಳ ಪ್ರಭಾವಕ್ಕೆ ಒಳಗಾದ ಇವರು ಜನಪದ ಸಾಹಿತ್ಯದ ಬಗೆಗೆ ಸಹಜವಾದ ಕುತೂಹಲವನ್ನು ಮತ್ತು ಆಸಕ್ತಿಯನ್ನು ಬಾಲ್ಯದಲ್ಲಿಯೇ ಹೊಂದಿದ್ದರು. ತಮಗೆ ಪರಿಚಿತ ಹಳ್ಳಿಗಳಲ್ಲಿ ಆಗಾಗ್ಗೆ ದೇವೀಪುರಾಣ, ಬಸವಪುರಾಣಗಳನ್ನು ಹೇಳಿಸುತ್ತಿದ್ದರು. ಇವುಗಳ ಶ್ರವಣದಿಂದ ಬಾಲಕ ಆರ್.ಸಿ. ಅವರು 'ಶರಣ ಚರಿತ್ರೆ' ಗಳನ್ನು ಪರಿಚಯಿಸಿಕೊಂಡರು. ತಾವು ಬೆಳೆದಂತೆಲ್ಲಾ ಆ ಪುರಾಣ ಕಾವ್ಯಗಳಲ್ಲಿ ಮತ್ತು ವಚನಗಳಲ್ಲಿ ಕಂಡುಬರುವ ವಿವಿಧ ಜನಪದ ಅಂಶಗಳನ್ನು ಗುರುತಿಸುವುದು ಅವರಿಗೆ ಕುತೂಹಲದ ವಿಷಯವಾಗಿತ್ತು.

ಡಾ। ಹಿರೇಮಠರು ಮೂಲತಃ ಹಳ್ಳಿಯವರಾದುದರಿಂದಲೇ ಅವರಲ್ಲಿ ಜಾನಪದ ದಟ್ಟ ಸಂವೇದನೆಗಳು ನೆಲೆಯೂರಿವೆ. ಹಾಗಾಗಿ ಅವರ ಉಪನ್ಯಾಸದಲ್ಲಿ ವೈಚಾರಿಕತೆಗಿಂತ ಭಾವುಕತೆ ಅಂದರೆ ವಿಮರ್ಶೆಗಿಂತ ಸಹೃದಯತೆ ಒಂದು ಗುಂಜಿ ಅಧಿಕವೆಂದೇ ಹೇಳಬೇಕು (ಎಂ.ಎಂ. ಕಲಬುರ್ಗಿ). ಆದರೆ ಗದ್ಯದ ಬರೆವಣಿಗೆಯಲ್ಲಿ ಜಾನಪದ ಪ್ರಭಾವಕ್ಕೆ ಪಕ್ಕಾದಂತಿಲ್ಲದುದು ಆಶ್ಚರ್ಯದ ಸಂಗತಿ. ಆರ್.ಸಿ. ಅವರು ತಮ್ಮ ಕವಿತೆಯ ವೈವಿಧ್ಯತೆಗೆ ಜನಪದ ಶಯ್ಯೆಗಳನ್ನು ಅಳವಡಿಸಿಕೊಂಡಿದ್ದುದು ತಿಳಿದುಬರುತ್ತದೆ. ಇವರ ಜನಪದ ಛಂದದ ಬಂಧ ಕವಿತೆಯ ಅಂದವನ್ನು ಹೆಚ್ಚಿಸಿದೆ.

ಜಾನಪದ ಅಧ್ಯಯನ–ಕೊಡುಗೆ

ಕರ್ನಾಟಕ ಜಾನಪದ ಕ್ಷೇತ್ರದಲ್ಲಿ ಮೊದಲ ದುಡಿಮೆ ಪಾಶ್ಚಾತ್ಯರದೇ. ಇವರ ನಂತರ ಕ್ಷಿಪ್ರವಾಗಿಯೇ ಹಲಸಂಗಿ ಗೆಳೆಯರ ಗುಂಪಿನ ಮಧುರಚೆನ್ನ, ಕಾಪಸೆ ರೇವಪ್ಪ, ಪಿ. ಧೂಲಾಸಾಹೇಬ ಹಾಗೂ ಸಿಂಪಿ ಲಿಂಗಣ್ಣನವರು,

'ಗರತಿಯ ಹಾಡು', 'ಮಲ್ಲಿಗೆ ದಂಡೆ', 'ಜೀವನ ಸಂಗೀತ' ಗಳಂಥ ಉತ್ಕೃಷ್ಟ ಜನಪದ ಗೀತ ಸಂಗ್ರಹಗಳನ್ನು ಹೊರತಂದರು. ಜಾನಪದ ಅಧ್ಯಯನಕ್ಕೆ ಬುನಾದಿ ಹಾಕಿದರು. ಸನಾದಿ ಊದಿದರು. ಕ್ರಮೇಣ ಮೈಸೂರು, ಕರ್ನಾಟಕ, ಗುಲಬರ್ಗಾ, ಬೆಂಗಳೂರು, ಕುವೆಂಪು ಮೊದಲಾದ ವಿಶ್ವವಿದ್ಯಾಲಯಗಳು ತಮ್ಮ ಸ್ನಾತಕೋತ್ತರ ತರಗತಿಗಳಲ್ಲಿ ಜಾನಪದ ಬೋಧನೆಯನ್ನು ಅಳವಡಿಸಿಕೊಂಡುವು. ಅಷ್ಟೇ ಅಲ್ಲ, ಜನಪದದಲ್ಲಿ ಎಂ.ಎ. ಪದವಿಯನ್ನು ಪಡೆಯಲು ಅವಕಾಶ ಕಲ್ಪಿಸಿಕೊಟ್ಟವು. ನಾಡಿನ ವಿದ್ವಾಂಸರ, ಆಸಕ್ತರ ಸಹಾಯದಿಂದ ಹಲವಾರು ಜನಪದ ಸಂಗ್ರಹಗಳನ್ನು ಸಂಪಾದಿಸಿ ಪ್ರಕಟಿಸಿದುವು. ಈ ನಿಟ್ಟಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಪೀಠದ ಶಿಲ್ಪಿ ಡಾ। ಆರ್.ಸಿ. ಹಿರೇಮಠ ಅವರು ಜನಪದ ಅಧ್ಯಯನದ ಧ್ವಜವನ್ನು ಎತ್ತಿಹಿಡಿದರು. ಡಾ। ಎಂ.ಎಸ್. ಸುಂಕಪುರ, ಡಾ। ಎಸ್. ಎಂ. ವೇಷಭೇಂದ್ರ ಸ್ವಾಮಿ, ಡಾ। ಎಂ.ಎಂ. ಕಲಬುರ್ಗಿ, ಡಾ। ಎಸ್.ಜಿ. ಇಮ್ರಾಪುರ, ಮೊದಲಾದ ವಿದ್ವಾಂಸರು ಹಿರೇಮಠರು ಎತ್ತಿದ ಜಾನಪದ ಧ್ವಜನವನ್ನು ಹಿಡಿದು ಮುನ್ನಡೆದರು. ಅದು ಇಂದಿನವರೆಗೂ ಆಕಾಶದಲ್ಲಿ ಹಾರಾಡುತ್ತಿದೆ. ಕನ್ನಡದ ಕಟ್ಟಾಳು ಡಾ। ಹಿರೇಮಠರ ಮಹತ್ತರ ಕೊಡುಗೆಯಿದು.

ಉತ್ತರ ಕರ್ನಾಟಕ ಹಲಸಂಗಿ ಗೆಳೆಯರ ಬಳಗದ ಜನಪದ ಸಂಗ್ರಹ ಪ್ರಚಾರದ ತರುವಾಯ ಸುಮಾರು ಎರಡು ದಶಕಗಳವರೆಗೆ ಜಾನಪದ ಕ್ಷೇತ್ರದಲ್ಲಿ ಹೇಳಿಕೊಳ್ಳುವ ಕೆಲಸ ಆಗಲೇ ಇಲ್ಲ. ತಮ್ಮ ವೈಯಕ್ತಿಕ ಸಾಮರ್ಥ್ಯದಿಂದ ಆ ಕೊರತೆಯನ್ನು ತುಂಬಲು ಅನೇಕ ಕನ್ನಡ ಪ್ರಾಧ್ಯಾಪಕರು, ಸಾಹಿತಿಗಳು, ವಿದ್ವಾಂಸರು ಮುಂದೆ ಬಂದರು. ಅವರಲ್ಲಿ ಡಾ। ಬಿ.ಎಸ್. ಗದ್ದಗಿ ಮಠ ಹೆಸರಾಂತ ವಿದ್ವಾಂಸರು. ಜಾನಪದ ಕುರಿತು ಮೊದಲು ಪಿಎಚ್.ಡಿ. ಮಾಡಿದ ಸಂಶೋಧನ ಸಾಹಸಿಗಳು. ನಂತರ ಈ ಕ್ಷೇತ್ರ ಮತ್ತೆ ಕೆಲಕಾಲ ಪಡಭೂಮಿಯಾಗಿತ್ತು. ಇದನ್ನು ಮನಗಂಡು ಉತ್ತರ ಕರ್ನಾಟಕದಲ್ಲಿ ಜಾನಪದ ಕ್ಷೇತ್ರವನ್ನು ಉತ್ತು-

ಬಿತ್ತಿದ ಗಮನಾರ್ಹರಲ್ಲಿ ಡಾ। ಆರ್.ಸಿ. ಹಿರೇಮಠರು ಮಹತ್ವದವರು. ಕ.ವಿ.ವಿ. ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ತಮಗಿರುವ ಸಹಜಾಸಕ್ತಿಯಿಂದ, ಆ ಕಡೆಗೆ ವಿಶೇಷ ಒಲವು ಮೂಡಿಸಿಕೊಂಡರು. ಜಾನಪದದ ಹಲವು ಕಾರ್ಯಗಳನ್ನು ಯಶಸ್ವಿಯಾಗಿ ಪೂರೈಸಿದರು. ಕ.ವಿ.ವಿ.ಯಲ್ಲಿ ಎಂ.ಎ. ಜಾನಪದ ಆರಂಭ; ಉತ್ತರ ಕನಾಟಕ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಜನಪದ ಸಾಹಿತ್ಯದ ಘನತೆ ಕುರಿತು ಉಪನ್ಯಾಸ–ಪ್ರಚಾರ; ಜನಪದ ಸಾಹಿತ್ಯ ಮೇಳ–ಸಮ್ಮೇಳನ; ಕಮ್ಮಟಗಳ ಸಂಘಟನೆ, ಜನಪದ ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ; ಎಂ.ಎ. ಜಾನಪದ ವಿದ್ಯಾರ್ಥಿಳಿಗೆ ಜನಪದ ವಿಮರ್ಶೆ–ಮೀಮಾಂಸೆ; ಸಂಶೋಧನೆಯ ಬೋಧನೆ; ಜನಪದ ಸಂಶೋಧನಾತ್ಮಕ ಲೇಖನಗಳ ಪ್ರಕಟನೆ; ಜನಪದ ಗ್ರಂಥಗಳ ಪ್ರಕಟನೆಗೆ ಪ್ರೋತ್ಸಾಹ; ಜನಪದ ಕಲಾವಿದರಿಗೆ ಸಹಾಯ ಸಹಕಾರ... ಇವೇ ಮುಂತಾದವು ಡಾ। ಆರ್.ಸಿ. ಹಿರೇಮಠರ ಜಾನಪದದ ಕೊಡುಗೆಗಳು. ಇವರ ಜಾನಪದದ ನಾನಾ ನಿಟ್ಟಿನ ದುಡಿಮೆ, ಜಾನಪದ ಸಾಹಿತ್ಯ ಕಲೆಗಳ ಉಳಿವು–ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಸೇವಾ ನಿವೃತ್ತಿ ನಂತರದಲ್ಲಿಯೂ ಜಾನಪದ ಪ್ರಚಾರ ಕಾರ್ಯವನ್ನು ಸಭೆ–ಸಮ್ಮೇಳನಗಳ ಮೂಲಕ ಆಗಾಗ್ಗೆ ಕೈಗೊಂಡವರು. ಶಾಸನ, ಪ್ರಾಚೀನಕಾವ್ಯ, ಗ್ರಂಥ ಸಂಪಾದನೆ, ಭಾಷಾವಿಜ್ಞಾನ, ವಚನ ಸಾಹಿತ್ಯ ಸಂಪಾದನೆಗಳಷ್ಟೇ ಆಸಕ್ತಿಯನ್ನು ಜಾನಪದದ ಬಗೆಗೂ ಆರ್.ಸಿ. ಅವರು ತುಮಬಿಕೊಂಡಿದ್ದರೆಂಬುದು ಅವರ ಸಮೀಪದವರಿಗೆಲ್ಲ ಚೆನ್ನಾಗಿ ಗೊತ್ತು. ಅವರ ಮಾತುಗಳಲ್ಲಿ ಜಾನಪದ ಗಂಧಗಾಳಿ ಯಾವಾಗಲೂ ಹೊರಸೂಸುತ್ತಿದ್ದುದೂ ಇದಕ್ಕೆ ಸಾಕ್ಷಿ.

ಡಾ। ಆರ್.ಸಿ. ಹಿರೇಮಠ ಅವರು ಜಾನಪದ ಕ್ಷೇತ್ರದಲ್ಲಿಯೂ ಹಲವು ಪ್ರಥಮಗಳ ದಾಖಲೆ ನಿರ್ಮಿಸಿದ್ದಾರೆ. ಉದಾಹರಣೆಗೆ :

ಪ್ರಥಮ ಜನಪದ ಕಲಾಮೇಳ : “ಪ್ರಜಾತಂತ್ರದ ಈ ಯುಗದಲ್ಲಿ

ಪ್ರಜಾಸಾಹಿತ್ಯಕ್ಕೆ ಅಗ್ರಪೂಜೆ ಸಲ್ಲುವುದು ಯಥೋಚಿತವೂ ಅನಿವಾರ್ಯವೂ ಆಗಿದೆ" (ಆರ್.ಸಿ.ಹಿ). ಅಂತೆಯೇ ಶ್ರೀಸಾಮಾನ್ಯರಿಗೂ ರಾಷ್ಟ್ರದಲ್ಲಿ ಮಹತ್ವದ ಸ್ಥಾನವಿದೆ ಎಂಬುದನ್ನರಿತು ನಾಡಿನ ವಿದ್ವಾಂಸರು, ವಿಶ್ವವಿದ್ಯಾಲಯಗಳು, ಅವರ (ಜನಪದರ) ಜೀವನವಿಧಾನ, ಕಲೆ, ಸಂಸ್ಕೃತಿ, ಸಾಹಿತ್ಯ ಕುರಿತ ಅಧ್ಯಯನವನ್ನು ಕೈಗೆತ್ತಿಕೊಂಡಿವೆ. ಕರ್ನಾಟಕ ವಿಶ್ವವಿದ್ಯಾಲಯ ಇತಿಹಾಸದಲ್ಲಿಯೇ ಸುವರ್ಣಾಕ್ಷರಗಳಿಂದ ಬರೆದಿಡುವಂತಹ ದಿನ 1970ರ ಜನವರಿ 9; ಅಂದು ಕನ್ನಡ ವಿಭಾಗ ಮತ್ತು ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಗೋಕಾಕ– ಇವು ಜಂಟಿಯಾಗಿ ಪ್ರಥಮ ಜನಪದ ಕಲಾಮೇಳವನ್ನು ಗೋಕಾಕ ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿದ್ದುವು. ಗೋಕಾಕ ಕಾಲೇಜಿನ ಮಿತ್ರರು ಕರ್ನಾಟಕ ಸಂಘದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಬರಬೇಕೆಬ ಬೇಡಿಕೆಯನ್ನು ಮುಂದಿಟ್ಟಾಗ, ನಿಮ್ಮ ಭಾಗ ಜನಪದ ಕಲೆಗಳ ಕೇಂದ್ರ, ಸಾಧ್ಯವಾದಷ್ಟು ಕಲಾವಿದರನ್ನು ಆ ದಿನ ಸೇರಿಸಿರಿ ಎಂದು ಆರ್.ಸಿ. ಅವರು ವೃಷಭೇಂದ್ರಸ್ವಾಮಿ ಅವರ ಮೂಲಕ ತಿಳಿಸಿದ್ದರಂತೆ. ಶ್ರೀ ಬಿ.ಎಂ. ಕೌಜಲಗಿ, ಕಾಲೇಜಿನ ಪ್ರಥಮ ಪ್ರಾಚಾರ್ಯ ಡಾ.ವಿ.ವಿ. ಬಾಗಲಕೋಟೆ ಮತ್ತು ಕಾಲೇಜಿನ ಸಿಬ್ಬಂದಿಯವರ ಉತ್ಸಾಹ-ಪ್ರೋತ್ಸಾಹದಿಂದ ಅದು ದೊಡ್ಡ ಜಾನಪದ ಕಲಾಮೇಳವೇ ಆಗಿ ದಾಖಲೆ ಮಾಡಿತು ಎನ್ನುತ್ತಾರೆ ಡಾ। ವೃಷಭೇಂದ್ರ ಸ್ವಾಮಿ ಅವರು. ಜನವರಿ 9, 10 ಎರಡು ದಿನಗಳ ಮೇಳ ಅದಾಗಿತ್ತು. ಆರ್.ಸಿ. ಅವರು ಎಂ.ಎಸ್. ಸುಂಕಾಪುರ, ಎಸ್.ಎಂ. ವೃಷಭೇಂದ್ರಸ್ವಾಮಿ ಅವರ ನೆರವಿನಿಂದ ಈ ಮಹತ್ವದ ಕಲಾಮೇಳ ಹಮ್ಮಿಕೊಂಡು ಯಶಸ್ವಿಗೊಳಿಸಿದ್ದು ಒಂದು ಸಾಧನೆಯೇ!

ಈ ಮೇಳದಲ್ಲಿ ವಿವಿಧ ವಿಚಾರಗೋಷ್ಠಿಗಳು, ನಾನಾ ಕಲಾಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗಿತ್ತು. ಮೇಳದ ಆದಿಯಿಂದ ಅಂತ್ಯದವರೆಗೂ ಆರ್.ಸಿ. ಅವರು ಇಬ್ಬರು ಸಹಪಾಠಿಗಳೊಂದಿಗೆ

ದುಡಿದಿದ್ದಾರೆ. 'ಗೋಕಾಕದ ಈ ಪ್ರಥಮ ಜಾನಪದ ಮೇಳ' ವೇ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ' ಕ್ಕೆ ನಾಂದಿ. ಮುಂದೆ 1972 ರಲ್ಲಿ ಧಾರವಾಡ ಜಿಲ್ಲೆ ನರಗುಂದದಲ್ಲಿ 'ಜನಪದ ಸಾಹಿತ್ಯ ಮೇಳ' ವನ್ನು ಅಧ್ಯಯನ ಸಂಸ್ಥೆಯ ಆಶ್ರಯದಲ್ಲಿ ಸುಂಕಾಪುರ, ವೃಷಭೇಂದ್ರ ಸ್ವಾಮಿಯವರ ನೆರವಿನಿಂದ ಆರ್.ಸಿ. ಅವರು ಹಮ್ಮಿಕೊಂಡಿದ್ದರು. ಅಲ್ಲಿಯೂ ಕ್ರಿಯಾಶೀಲರಾಗಿ ಕಾರ್ಯಕ್ರಮ ಆಯೋಜಿಸಿದ ಆರ್.ಸಿ.ಯವರು ತಮ್ಮ ಪ್ರತಿಭೆ-ಪಾಂಡಿತ್ಯಗಳ ಸಂಪನ್ನತೆಯಿಂದ ಜನಪದ ಸಾಹಿತ್ಯದ ಪ್ರಚಾರ-ಪ್ರಸಾರಕ್ಕೆ ಒತ್ತು ನೀಡಿ, ಸೂಕ್ತ ಮಾತುಗಳನ್ನಾಡಿ, ಜನತೆಯಲ್ಲಿ ಜನಪದ ಕುರಿತು ಪ್ರೀತಿಯನ್ನು ತುಂಬಿದರು. ಹಲಸಂಗಿ ಗೆಳೆಯರ ನಂತರದ, ಜಾನಪದ ಕ್ಷೇತ್ರದ ಮಹತ್ತರ ಘಟನೆಗಳು ಈ ಗೋಕಾಕ ಮತ್ತು ನರಗುಂದದ ಜಾನಪದ ಕಲಾಮೇಳಗಳು. ಇವುಗಳ ರೂವಾರಿ ಆರ್.ಸಿ. ಡಾ। ಆರ್.ಸಿ. ಹಿರೇಮಠರಾದರೆ; ಸ್ಫೂರ್ತಿ ಚೇತನರು ಎಂ.ಎಸ್.ಸೂಕಾಪುರ ಮತ್ತು ಎಸ್.ಎಂ. ವೇಷಭೇಂದ್ರ ಸ್ವಾಮಿಯವರೆಂಬುದು ಉಲ್ಲೇಖನೀಯ.

ಅಖಿಲ ಕರ್ನಾಟಕ ಪ್ರಥಮ ಜನಪದ ಸಾಹಿತ್ಯ ಸಮ್ಮೇಲನ :

ಶಿಷ್ಟಸಾಹಿತ್ಯ ವಿಶೇಷವಾಗಿ ವಚನ ಸಾಹಿತ್ಯ ಸಂಪಾದನೆ-ಸಂಶೋಧನೆಗೇ ಕೇಂದ್ರೀಕೃತವಾದ ಕ.ವಿ.ವಿ. ಕನ್ನಡ ವಿಭಾಗದಲ್ಲಿ ಜಾನಪದ ವಿಭಾಗ-ಜಾನಪದ ಅಧ್ಯಯನ-ಸಂಶೋಧನ ಪ್ರಾರಂಭವಾಗಲು ಡಾ। ಆರ್.ಸಿ. ಡಾ। ಆರ್.ಸಿ. ಹಿರೇಮಠರೇ ಕಾರಣ. ಮೈಸೂರು ವಿಶ್ವವಿದ್ಯಾನಿಲಯದ ಮಾದರಿಯನ್ನು ಮುಂದಿಟ್ಟುಕೊಡು ಕನ್ನಡ ಸಾಹಿತ್ಯ ಮತ್ತು ಜನಪದ ಸಾಹಿತ್ಯಕ್ಕೆ ಸಮಾನ ಸ್ಥಾನಮಾನವನ್ನು ದೊರಕಿಸಿಕೊಡುವಲ್ಲಿ ಶ್ರೀಯುತರು ವಹಿಸಿದ ಪಾತ್ರ ಗಮನಾರ್ಹವಾದುದು. ಸುಂಕಾಪುರ, ವೃಷಭೇಂದ್ರ ಸ್ವಾಮಿ, ಕಲಬುರ್ಗಿ, ಇಮ್ರಾಪುರ ಮೊದಲಾದ ವಿಭಾಗದ ಪ್ರಾಧ್ಯಾಪಕರು ಈ ನಿಟ್ಟಿನಲ್ಲಿ ಹಿರೇಮಠರೊಡನೆ ಹೋರಾಡಿದುದನ್ನು ಅಲ್ಲಗಳೆಯಲಾಗದು.

ಕ.ವಿ.ವಿ. ಸ್ನಾತಕೋತ್ತರ ಶಿಕ್ಷಣ ಮಟ್ಟದಲ್ಲಿ ಜನಪದ ಸಾಹಿತ್ಯ ಅಧ್ಯಯನ, ಬೋಧನ, ಸಂಶೋಧನ, ಪ್ರಕಟನ ಹಾಗೂ ಪ್ರಸಾರ ಕಾರ್ಯಗಳು ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದವರು. ಆರ್.ಸಿ. ಅವರು. ಪ್ರತಿ ವರ್ಷ ನಾಡಿನ ನಗರ-ಹಳ್ಳಿಗಳಲ್ಲಿ ಜಾನಪದ ಸಮ್ಮೇಳನಗಳನ್ನು ಏರ್ಪಡಿಸಿ, ಜನಪದ ಕಲೆ, ಕಲಾವಿದರನ್ನು ಪ್ರೋತ್ಸಾಹಿಸುತ್ತ, ವಿಶೇಷವಾಗಿ ಜನಪದ ಕಲೆಗಳನ್ನು ಸಂರಕ್ಷಿಸುತ್ತ ಬಂದರು. 'ಅಖಿಲ ಕರ್ನಾಟಕ ಪ್ರಥಮ ಜನಪದ ಸಾಹಿತ್ಯ ಸಮ್ಮೇಳನ' ವನ್ನು 1973 ಜನವರಿ 23 ರಂದು ಸುರು ಮಾಡಿದವರೇ ಹಿರೇಮಠರು. ಅದು ಇಂದಿನವರೆಗೂ ಅನುಚಾನವಾಗಿ ವರುಷಕ್ಕೊಮ್ಮೆಯಂತೆ ಸಾಗಿಬಂದಿದೆ. ಈ ಸಮ್ಮೇಳನಗಳು ಕೆಲವು ಕಡೆ ಎರಡು ದಿನ ನಡೆದರೆ, ಇನ್ನು ಕೆಲವು ಕಡೆ ಮೂರು ದಿನಗಳವರೆಗೆ ನಡೆದಿವೆ. ಡಾ। ಹಿರೇಮಠರ ಸಮ್ಮೇಳನ ಸಂಘಟನಾ ಶಕ್ತಿಯಿಂದ ಅಧ್ಯಯನ ವಿಭಾಗದ ಮುಖ್ಯಸ್ಥರು ತಮ್ಮ ತಮ್ಮ ಸೇವಾವಧಿಯಲ್ಲಿ ಪ್ರತಿವರುಷ ನಾಡಿನ ವಿವಿಧೆಡೆ ವಿವಿಧ ವಿಷಯ ಕುರಿತ ಸಮ್ಮೇಳನ ಸಂಘಟಿಸುತ್ತ ಬಂದರು. ಅದು ಈಗಲೂ ಮುಂದುವರಿದಿದೆ. ಜಾನಪದ ಅಧ್ಯಯನ ವಿಭಾಗದ ಮೂಲಕ, ಸಮ್ಮೇಳನ-ವಿಚಾರಸಂಕಿರಣ-ಸಮ್ಮೇಳನ ವರದಿ ಹಾಗೂ ಮಂಡಿಸಿದ ಪ್ರಬಂಧಗಳು 'ಜಾನಪದ ಸಾಹಿತ್ಯ ದರ್ಶನ' ಸಂಪುಟಗಳಲ್ಲಿ ಪ್ರಕಟಗೊಳ್ಳುತ್ತಾ ಬಂದಿವೆ. ಮೊದಲ ಸಂಪುಟದ ಸಂಪಾದಕರು ಆರ್.ಸಿ ಅವರೇ. ಈ ಮೂಲಕ ಇವರ ಹೆಸರು ಜಾನಪದ ಲೋಕದಲ್ಲಿ ಕೇಳಿಬರುತ್ತಿದೆ; 'ಜಾನಪದ ವಿದ್ವಾಂಸರ ಚರಿತ್ರೆ' ಯಲ್ಲಿ ಸೇರಿದ್ದಾರೆ. ಜನಪದ ಕ್ಷೇತ್ರದಲ್ಲಿ ತುಂಬ ನಿಷ್ಠೆಯಿಂದ ದುಡಿದಿದ್ದಾರೆ. ಅನೇಕ ಶಿಷ್ಯರಿಗೆ ದುಡಿಯಲು ಪ್ರೇರೇಪಿಸಿದ್ದಾರೆ. "ಜಾನಪದ ಸಾಹಿತ್ಯ ದರ್ಶನ' ಹೆಸರಿನ ಸಂಪುಟಗಳ ಪ್ರಕಟನೆ ಒಂದು ಅನುಕರಣೀಯ ಉಪಕ್ರಮವನ್ನಾಗಿ ರೂಪಿಸಲು ಕಾರಣರಾದವರೇ ಹಿರೇಮಠರು. ಇವು ಜನಪದ ಸಾಹಿತ್ಯಕ, ವೈಜ್ಞಾನಿಕ ವಿಷಯಗಳ ತಲಸ್ಪರ್ಶಿ ಸಂಶೋಧನಾಧ್ಯಯನಕ್ಕೆ ದಾರಿ ಮಾಡಿಕೊಡುವಲ್ಲಿ ಹೊಸ ಹೊಸ ಸಂಶೋಧನೆ, ಹೊಸ ಹೊಸ

ಪ್ರಯೋಗಗಳಿಗೆ ಅಧಿಕೃತ ಗ್ರಂಥಾಲಯಗಳು ವಿಶೇಷ ಗಮನಹರಿಸಿ ದುಡಿದರು. ಇವು ಕರ್ನಾಟಕ ಜನಪದ ಅಧ್ಯಯನಕ್ಕೆ ಗಮನಾರ್ಹ ಕೊಡುಗೆಗಳಾಗಿವೆ.

ಜಾನಪದ ಸಮ್ಮೇಳನಗಳಿಗೆ ಅಖಿಲ ಕರ್ನಾಟಕ ಮಹತ್ವ–ಖ್ಯಾತಿ ತಂದುಕೊಟ್ಟ ಮೊದಲಿಗರು ಆರ್.ಸಿ. ಅವರೇ. ಮುಂದಿನ ಜಾನಪದ ಕ್ಷೇತ್ರದ ಅಧ್ಯಯನಕ್ಕೆ ಇವು ಮೂಲದಾಖಲೆಗಳಾಗಿವೆ. ಜಾನಪದವನ್ನು ಕುರಿತ ರಾಜ್ಯಮಟ್ಟದ ಏಕೈಕ ಕ್ರಿಯಾಶೀಲ ವೇದಿಕೆಯಿದು. ಅಖಿಲ ಭಾರತದಲ್ಲಿಯೇ ಪ್ರತಿ ವರ್ಷ ತಪ್ಪದೇ ನಡೆಸುತ್ತ ಬರಲಾಗುವ ಏಕೈಕ ಸಮ್ಮೇಳನವೆಂಬ ಕೀರ್ತಿ ಈ ಸಮಾವೇಶಗಳದ್ದೇ. ಈ ಸಮ್ಮೇಳನದಲ್ಲಿ ಜಾನಪದ ಕ್ಷೇತ್ರದಲ್ಲಿ ದುಡಿದು ಹೆಸರುಗಳಿಸಿದ ವಿದ್ವಾಂಸರನ್ನು ಸರ್ವಾಧ್ಯಕ್ಷರನ್ನಾಗಿ ಮಾಡಿ ಗೌರವಿಸುವ ಪರಂಪರೆಯೂ ಔಚಿತ್ಯಪೂರ್ಣವಾಗಿದೆ. ಸಮ್ಮೇಳನಗಳನ್ನು ಹಮ್ಮಿಕೊಳ್ಳುವ ಕಾರ್ಯದಲ್ಲಿ ಗಮನೀಯ ಪ್ರಗತಿಯನ್ನು ಸಾಧಿಸಲಾಗಿದೆ. ಈ ಕೀರ್ತಿ ಆರ್.ಸಿ. ಅವರಿಗೇ ಸಲ್ಲಬೇಕಾದುದು.

1973, ಜನವರಿ ತಿಂಗಳಿನಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಆವರಣದಲ್ಲಿ 'ಅಖಿಲ ಕರ್ನಾಟಕ ಮಟ್ಟದ ಪ್ರಥಮ ಜನಪದ ಸಮ್ಮೇಳನ ಜರುಗಿತು. ಇದರ ರೂವಾರಿ ಹಿರೇಮಠರೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಸಮ್ಮೇಳನದ ವೇದಿಕೆಗೆ 'ಮಧುರಚೆನ್ನ' ಮಂಟಪ ಎಂಬ ಹೆಸರನ್ನಿರಿಸಲಾಗಿತ್ತು. ಮೂರು ದಿನಗಳವರೆಗೆ ಸಮ್ಮೇಳನ ನಡೆಯಿತು. ಜನಪದ ಸಾಹಿತ್ಯ ಕಲೆ ಕುರಿತ ಸಮ್ಮೇಲನ. ಸಮ್ಮೇಲನದ ಅಧ್ಯಕ್ಷರು ಡಾ। ಶಿವರಾಮ ಕಾರಂತರು. ಉದ್ಘಾಟನೆ ಡಾ। ಸರೋಜಿನಿ ಮಹಿಷಿ. ಹಗಲು ಜನಪದ ಸಾಹಿತ್ಯ ಕುರಿತ ಚರ್ಚೆ, ರಾತ್ರಿ ಜಾನಪದ ರಂಗದರ್ಶನದ ರಂಜನೆ. ಡಾ। ಆರ್.ಸಿ. ಹಿರೇಮಠ, ಡಾ। ಎಲ್.ಆರ್. ಹೆಗಡೆ, ಪ್ರೊ. ಚಂದ್ರಶೇಖರ ಕಂಬಾರ, ಪ್ರೊ. ಸುಶೀಲಾ ಪಟ್ಟಣಶೆಟ್ಟಿ, ಪ್ರೊ. ಜ್ಯೋತಿ ಹೊಸೂರ, ಡಾ। ಕೆ.ಜಿ. ಶಾಸ್ತ್ರಿ, ಶ್ರೀ ಚೆನ್ನವೀರ ಕಣವಿ,

ಡಾ। ಬಿ.ಬಿ.ಹೆಂಡಿ, ಡಾ। ಎಂ.ಎಸ್. ಸುಂಕಾಪುರ, ಡಾ। ಎಸ್.ಜಿ. ಇಮ್ರಾಪುರ, ಡಾ। ಜೆ.ಎಸ್. ಕುಳ್ಳಿ, ಡಾ। ಎಂ.ಜಿ. ಬಿರಾದಾರ, ಶ್ರೀ ಎಂ.ಜಿ. ಈಶ್ವರಪ್ಪ, ಪ್ರೊ.ಎನ್.ಆರ್. ನಾಯಕ್, ಡಾ। ಎಂ.ಬಿ. ಕೊಟ್ರಶೆಟ್ಟಿ, ಪ್ರೊ. ದೇವೇಂದ್ರ ಕುಮಾರ ಹಕಾರಿ, ಪ್ರೊ.ಎಂ. ಅಕಬರ ಅಲಿ, ಪ್ರೊ. ಪಿ.ಕೆ. ಭಾಗೋಜಿ ಮೊದಲಾದವರು ಪ್ರಬಂಧ ಮಂಡಿಸಿದ ಅಂದಿನ ವಿದ್ವಾಂಸರು. ವಿವಿಧ ಗೋಷ್ಠಿಗಳ ಅಧ್ಯಕ್ಷತೆಯನ್ನು ವಹಿಸಿದವರು ಡಾ। ದ.ರಾ.ಬೇಂದ್ರೆ, ಶ್ರೀ ಬೆಟಗೇರಿ ಕೃಷ್ಣಶರ್ಮ ಮತ್ತು ಶ್ರೀ ಸಿಂಪಿ ಲಿಂಗಣ್ಣ ಅವರು. ಹಮ್ಮಿಕೊಂಡ ಮೂರು ಗೋಷ್ಠಿಗಳಲ್ಲಿ ಮಂಡಿತ ವಿಷಯಗಳು: ಜಾನಪದ ಅಧ್ಯಯನ ವ್ಯಾಪ್ತಿ–ಜಾನಪದ ಸಂಗ್ರಹಣ ಮತ್ತು ಅಧ್ಯಯನ – ಜನಪದದಲ್ಲಿ ಆಶಯ ಮತ್ತು ವರ್ಗ–ಕನ್ನಡ ಜಾನಪದ ಸಾಹಿತ್ಯದ ಇತಿಹಾಸ–ಪ್ರಾಚೀನ ಕನ್ನಡ ಸಾಹಿತ್ಯದ ಮೇಲೆ ಜಾನಪದ ಪ್ರಭಾವ–ಆಧುನಿಕ ಸಾಹಿತ್ಯದ ಮೇಲೆ ಜಾನಪದ ಪ್ರಭಾವ– ಕನ್ನಡ ಜನಪದ ಸಾಹಿತ್ಯದ ಪ್ರಾಂತಬೇಧಗಳು – ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಪ್ರಕಾರಗಳು – ಜನಪದ ಸಾಹಿತ್ಯದ ಕಾವ್ಯಭಾಷೆ– ಜನಪದ ಸಾಹಿತ್ಯದ ಭಾಷಾಸ್ವರೂಪ – ಜನಪದ ಹಾಡುಗಳ ಛಂದಸ್ಸು, ಲಯ–ಕನ್ನಡ ಜನಪದ ಸಾಹಿತ್ಯದ ಸಂಕಲನ ಕೃಷಿ–ಕನ್ನಡ ಜನಪದ ಸಾಹಿತ್ಯದ ವಿಮರ್ಶಾಕೃಷಿ–ಡೊಳ್ಳಿನ ಹಾಡು–ಲಾವಣಿ–ಗೊಂದಲಿಗರ ಹಾಡು – ಉತ್ತರ ಕರ್ನಾಟಕದ ಜನಪದ ರೂಪಕಗಳು – ಕರ್ಬಲಹಾಡು ಇತ್ಯಾದಿ. ಈ ಎಲ್ಲ ಮಂಡಿತ ಪ್ರಬಂಧಗಳನ್ನು 1974ರಲ್ಲಿ 'ಜಾನಪದ ಸಾಹಿತ್ಯ ದರ್ಶನ' ಭಾಗ–1 ರಲ್ಲಿ ಆರ್.ಸಿ. ಅವರು ಅಚ್ಚುಕಟ್ಟಾಗಿ ಸಂಪಾದಿಸಿದ್ದಾರೆ. ಕ.ವಿ.ವಿ. ಪ್ರಕಟಿಸಿದೆ. ಈ ಮೌಲಿಕ ಕೃತಿ ಆಕರ ಗ್ರಂಥವಾಗಿದೆ. ಆರ್.ಸಿ. ಅವರು ಪಟ್ಟ ಶ್ರಮ, ಅವರ ಪ್ರತಿಭೆ–ಪಾಂಡಿತ್ಯ, ಅವರಿಗಿರುವ ಜಾನಪದ ಕಾಳಜಿಗಳು ಈ ಸಮ್ಮೇಳನವನ್ನು ಹಮ್ಮಿಕೊಳ್ಳುವಲ್ಲಿ– ಪ್ರಬಂಧಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸುವಲ್ಲಿ ವ್ಯಕ್ತವಾದುದನ್ನು ಯಾರೂ ಗುರುತಿಸಬಹುದು. ಶಾಸ್ತ್ರಬದ್ಧ– ಯೋಜನಾಬದ್ಧ ಅವರ ಈ ಕಾರ್ಯ ಇಂದಿಗೂ ಪ್ರಸ್ತುತ, ಅನುಕರಣೀಯ. ಆರ್.ಸಿ. ಅವರಿಗಿರುವ ಆಳವಾದ

ಜಾನಪದ ತಿಳಿವಳಿಕೆ ಮತ್ತು ಕಾಳಜಿಗಳು ಈಗಿನವರಿಗೆ ಹೊಸ ಮಾರ್ಗ ತೆರೆಯಲು ಹತ್ತಿರದ ಬೆಳಕಾಗಿದೆ. ಈವರೆಗೆ ಕ.ವಿ.ವಿ. ಸುಮಾರು 34 ಅಖಿಲ ಕರ್ನಾಟಕ ಜಾನಪದ ಸಮ್ಮೇಳನಗಳನ್ನು ಹಮ್ಮಿಕೊಂಡು ಯಶಸ್ವಿಗೊಳಿಸಿದೆ. ಅದಕ್ಕೆಲ್ಲ ಈ ಪ್ರಥಮ ಸಮ್ಮೇಳನವೇ ಪ್ರೇರಣೆ–ಮಾರ್ಗದರ್ಶಕ. ಕೆಲವು ಸಮ್ಮೇಲನಗಳು ಧಾರವಾಡದಲ್ಲಿಯೇ ಜರುಗಿದವು. ಕನ್ನಡ ಅಧ್ಯಯನ ಪೀಠ, ನಂತರ ಜಾನಪದ ಅಧ್ಯಯನ ವಿಭಾಗ ಅವುಗಳನ್ನು ಗುಲ್ಬರ್ಗ, ಇಳಕಲ್ಲು, ಗದಗ, ಅಂಕೋಲ, ಬನಹಟ್ಟಿ, ಲಕ್ಷ್ಮೇಶ್ವರ, ಸವದತ್ತಿ, ಬೆಳಗಾವಿ, ದಾವಣಗೆರೆ, ಹೊನ್ನಾವರ, ದಾಂಡೇಲಿ, ಆದಿಚುಂಚನಗಿರಿ, ಮುಂಡರಗಿ, ಸಿರಸಿ, ಸಿಂದಗಿ, ಭದ್ರಾವತಿ, ಹುಬ್ಬಳ್ಳಿ, ರಾಣಿಬೆನ್ನೂರ, ಶಿಗ್ಗಾಂವಗಳಲ್ಲಿ ಯಶಸ್ವಿಯಾಗಿ ಜರುಗಿಸಿವೆ. ಬೆಗಾವಿಯಲ್ಲಿ ನಡೆದ 12ನೇ ಸಮ್ಮೇಲನದ ಅಂಗವಾಗಿ 'ಆಕಾಶ ಜಾನಪದ' ಹೆಸರಿನ ವಿಚಾರಸಂಕಿರಣ ಆಯೋಜಿಸಲಾಗಿತ್ತು. ಆಗ, 'ಜಗತ್ತಿನಲ್ಲಿಯೇ ಈ ವಿಷಯವನ್ನು ಕುರಿತು ನಡೆದ ಪ್ರಥಮ ಸಮ್ಮೇಲನವಿದು' ಎಂದಿದ್ದರು, ಡಾ। ಬಿ.ಎ. ವಿವೇಕ ರೈ. ಅಲ್ಲದೆ, ಒಂದು ವಿಶ್ವವಿದ್ಯಾಲಯದ ಒಂದು ವಿಭಾಗ ನಿರಂತರವಾಗಿ ಸಮ್ಮೇಲನ ನಡೆಸುತ್ತಿರುವುದು ಇಡೀ ಭಾರತದಲ್ಲಿಯೇ ಏಕೈಕ ಉದಾಹರಣೆ ಎಂದಿದ್ದರು ಡಾ। ಜೀಶಂಪ. ಇವು ಈ ಸಮ್ಮೇಲನದ ಮೌಲಿಕತೆಗೆ ಜೀವಂತ ಸಾಕ್ಷಿ. ಡಾ। ಆರ್.ಸಿ. ಹಿರೇಮಠ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಪ್ರಸ್ತುತ ಸಮ್ಮೇಲನ, ಪೀಠದ ಅಧ್ಯಕ್ಷ ಡಾ। ಎಂ.ಎಂ. ಕಲಬುರ್ಗಿಯವರ ನಿರ್ದೇಶನದಲ್ಲಿ ಮುಂದುವರಿದಿತ್ತು. ಶಿವರಾಮ ಕಾರಂತ, ಜಯದೇವಿ ತಾಯಿ ಲಿಗಾಡೆ, ದೇ. ಜವರೇಗೌಡ, ಗೊ.ರಾ. ಅಯ್ಯಂಗಾರ, ಜೋಳದ ರಾಶಿ ದೊಡ್ಡನಗೌಡ, ಸಿಂಪಿ ಲಿಂಗಣ್ಣ, ಎಚ್.ಎಲ್. ನಾಗೇಗೌಡ, ಎಲ್.ಆರ್. ಹೆಗಡೆ, ಎಂ.ಎಸ್. ಸುಂಕಾಪುರ, ಬಿ.ಬಿ. ಹೆಂಡಿ, ಸಿ. ಪಾರ್ವತಮ್ಮ, ಆರ್.ಸಿ. ಹಿರೇಮಠ, ಜೀ.ಶಂ. ಪರಮಶಿವಯ್ಯ, ಹಾ.ಮಾ. ನಾಯಕ, ಎಸ್.ಕೆ. ಕರೀಂಖಾನ್, ಚಂದ್ರಶೇಖರ ಕಂಬಾರ, ಗೊ.ರು.ಚ. ಕು.ಶಿ. ಹರಿದಾಸ ಭಟ್ಟ, ಎಂ.ಎಸ್. ಲಠ್ಠೆ, ಬಿ.ಎ. ವಿವೇಕ ರೈ, ಮುದೇನೂರ ಸಂಗಣ್ಣ,

ದೇವೇಂದ್ರ ಕುಮಾರ ಹಕಾರಿ, ಎಂ.ಜಿ. ಬಿರಾದಾರ, ಎಚ್.ಜೆ. ಒಕ್ಕಪ್ಪಗೌಡ, ಪಿ.ಆರ್. ತಿಪ್ಪೇಸ್ವಾಮಿ, ವಿಲ್ಯಂ ಮಾಡ್ತಾ, ಎಸ್.ಆರ್. ನಾಯಕ, ಎಸ್.ಜಿ. ಇಮ್ರಾಪುರ, ಮತಿಘಟ್ಟ ಕೃಷ್ಣಮೂರ್ತಿ, ಸಿ.ಪಿ. ಕೃಷ್ಣಕುಮಾರ್, ಡಿ.ಕೆ. ರಾಜೇಂದ್ರ, ಸುಶೀಲಾ ಉಪಾಧ್ಯಾಯ, ಬಸವರಾಜ ಮಲಶೆಟ್ಟಿ (2007) ಪ್ರೊ. ಅಮೃತ ಸೋಮೇಶ್ವರ (2008) ಮುಂತಾದ ಹೆಸರಾಂತ ವಿದ್ವಾಂಸರನ್ನು 1973ರಿಂದ 2008 ರವರೆಗೆ ಹಮ್ಮಿಕೊಂಡು ಬಂದ ಜಾನಪದ ಸಮ್ಮೇಲನಗಳ ಅಧ್ಯಕ್ಷರನ್ನಾಗಿ (ಅನುಕ್ರಮವಾಗಿ) ನಿಯೋಜಿಸಲಾಗಿತ್ತು. ಜಾನಪದ ಸಾಹಿತ್ಯ–ಕಥೆ, ಬಯಲಾಟ, ಲಾವಣಿ; ಬಯಲಾಟ–ಜಾನಪದ ವಾದ್ಯ ಸಾಹಿತ್ಯ – ಭಜನೆ – ಲಾವಣಿ – ಗೀಗೀ ಸಂಪ್ರದಾಯ – ಉತ್ತರ ಕರ್ನಾಟಕದ ಜಾನಪದ ವೃತ್ತಿಕಾರರು – ಉತ್ತರ ಕರ್ನಾಟಕದ ಆಯುಗಾರರು – ಕರ್ನಾಟಕದ ಸ್ತ್ರೀ ಗ್ರಾಮದೇವತೆಗಳು – ಕರ್ನಾಟಕ ಪುರುಷ ಗ್ರಾಮದೇವತೆಗಳು – ಜಾನಪದ ಹಬ್ಬಗಳು – ಏಳು ಕೊಳ್ಳದ ಎಲ್ಲಮ್ಮ – ಆಕಾಶ ಜಾನಪದ – ಮೈಲಾರಲಿಂಗ, ಜನಪದ ಕುಣಿತ– ವಾದ್ಯ – ಸಂಗೀತ – ಪುರಾಣ – ಐತಿಹ್ಯ – ದಂತ ಕಥೆ – ತೊಗಲು ಗೊಂಬೆಯಾಟ – ಜನಾಂಗಿಕ ಅಧ್ಯಯನ – ಸಸ್ಯ ಜಾನಪದ – ಪ್ರಾಣಿ ಜಾನಪದ – ವಸತಿ ಜಾನಪದ – ಜನಪದ ಆಹಾರ – ಪಾನೀಯ – ಜನಪದ ಉಡುಗೆ – ತೊಡುಗೆ – ಜನಪದ ಚಿತ್ರಕಲೆ, ಧಾರ್ಮಿಕ ಜಾನಪದ – ಜನಪದ ವೈದ್ಯ – ಜಾನಪದ ಸಂಶೋಧನೆ – ಜನಪದ ಮಹಾಕಾವ್ಯಗಳು – ಜಲಜಾನಪದ – ಕೃಷಿ ಜಾನಪದ – ಜಾನಪದ ಮತ್ತು ಜಾಗತೀಕರಣ – ಜಾನಪದ ಮತ್ತು ಪ್ರವಾಸೋದ್ಯಮ, 'ಕರ್ನಾಟಕ ಜಾನಪದಕ್ಕೆ ವಿದೇಶಿಯರ ಕೊಡುಗೆ' ಇತ್ಯಾದಿ ವೈವಿಧ್ಯಪೂರ್ಣ ವಿಷಯುಗಳನ್ನು ಸಮ್ಮೇಳನಗಳಲ್ಲಿ ಅಳವಡಿಸಲಾಗಿತ್ತು. ಆರಂಭದ ಬಹುತೇಕ ಸಮ್ಮೇಲನಗಳು ಆರ್.ಸಿ. ಅವರ ನಿರ್ದೇಶನದಲ್ಲಿ ಜರುಗಿವೆ.

ಜಾನಪದ ಅಧ್ಯಯನಕ್ಕೆ ಅವಕಾಶ :

ಉತ್ತರ ಕರ್ನಾಟಕ ಜಾನಪದ ತವರು. ಇಲ್ಲಿರುವ ಜಾನಪದ

ಸಮೃದ್ಧವಾದುದು. ಕರ್ನಾಟಕ ಜಾನಪದಕ್ಕೆ ಉ.ಕ. ತನ್ನದೇ ಕೊಡುಗೆಯಿತ್ತಿದೆ. ಅದು ಅಮೋಘವೂ ಅಪೂರ್ವವೂ, ಅಮೂಲ್ಯವೂ ಆಗಿದೆ. ಗ್ರಾಮೀಣ ಬೀದಿ ಸಾಹಿತ್ಯವನ್ನು ವಿಶ್ವವಿದ್ಯಾಲಯದ ಮಟ್ಟಕ್ಕೇರಿಸಿದ ಕೀರ್ತಿ ಸಲ್ಲಬೇಕಾದುದು ಆರ್.ಸಿ. ಅವರಿಗೆ. ಕ.ವಿ.ವಿ. ದಲ್ಲಿ ಕನ್ನಡ ವಿಭಾಗದ ಮೂಲಕ ಜನಪದ ಸಾಹಿತ್ಯಕ್ಕೆ ನಾನಾ ನಿಟ್ಟಿನ ಪ್ರೋತ್ಸಾಹ ನೀಡಿದ ಮೊದಲಿಗರು. ಶಿಷ್ಟಪದ ಸಾಹಿತ್ಯದಷ್ಟೇ ಪ್ರಮುಖವಾದುದು ಜನಪದ ಸಾಹಿತ್ಯ. ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಜನಪದ ಸಾಹಿತ್ಯಾಧ್ಯಯನ ಒಂದು ಶೈಕ್ಷಣಿಕ ಶಿಸ್ತಾಗಿ ಬೆಳೆದುಬರುತ್ತಿರುವ ಸಂದರ್ಭದಲ್ಲಿ, ಕ.ವಿ.ವಿ. ಕನ್ನಡ ವಿಭಾಗದಲ್ಲಿ ಜನಪದ ಸಾಹಿತ್ಯವನ್ನು ಐಚ್ಛಿಕ ವಿಷಯವಾಗಿ ಸ್ನಾತಕೋತ್ತರ ತರಗತಿಗಳಲ್ಲಿ ಬೋಧನೆಗೆ (1972) ಅವಕಾಶ ಕಲ್ಪಿಸಿದವರು ಆರ್.ಸಿ. ಅವರು. ಮುಂದೆ 1973 ರಲ್ಲಿ ಜಾನಪದ ಸಾಹಿತ್ಯದಲ್ಲಿ ಸ್ನಾತಕೋತ್ತರ ಕೋರ್ಸನ್ನೇ ತೆರೆದರು. ಜನಪದ ಸಾಹಿತ್ಯದ ವ್ಯವಸ್ಥಿತ ಅಧ್ಯಯನಕ್ಕೆ ಎಲ್ಲ ಬಗೆಯ ಅನುಕೂಲತೆಗಳನ್ನು ಒದಗಿಸಿದರು. ಜನಪದ ಅಧ್ಯಯನದ ಪರಿಕಲ್ಪನೆಯನ್ನು ಆರ್.ಸಿ. ಅವರಿಂದ ಅರಿತ ಸಹೋದ್ಯೋಗಿ ಕನ್ನಡ ಪ್ರಾಧ್ಯಾಪಕರು ಜನಪದ ಅಧ್ಯಯನಕ್ಕೆ ತೊಡಗಿದರು.

ಮೂಲತಃ ಭಾಷಾವಿಜ್ಞಾನಿ, ಶಾಸನ ಶಾಸ್ತ್ರ, ಸಂಶೋಧನ ಕ್ಷೇತ್ರಗಳಲ್ಲಿ ತಮ್ಮ ಪಾಂಡಿತ್ಯವನ್ನು ಮೆರೆದ ಆರ್.ಸಿ. ಅವರು ಬರಬರುತ್ತ ಕನ್ನಡ ಜಾನಪದ ವಿಷಯದಲ್ಲಿ ತೀವ್ರವಾದ ಆಸಕ್ತಿ ಹೊಂದಿ, ಅಪಾರ ಕಾಳಜಿ ತಾಳಿ, ತಾವು ವಿಭಾಗದ ಮುಖ್ಯಸ್ಥರಾಗಿದ್ದ ಸಂದರ್ಭ (1957)ದಲ್ಲಿಯೇ ಜಾನಪದದ ಪುನರುಜ್ಜೀವನಕ್ಕೆ ಕೆಲವು ಯೋಜನೆಗಳನ್ನು ಹಾಕಿಕೊಂಡು ಕಾರ್ಯ ಪ್ರವೃತ್ತರಾದರು. ಅಖಿಲ ಕರ್ನಾಟಕ ಜಾನಪದ ಸಮ್ಮೇಳನವನ್ನು ಪ್ರತಿ ವರುಷ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನಡೆಸುವುದು; ಅದರ ಅಂಗವಾಗಿ ಹೊರಬಂದ ಲೇಖನಗಳನ್ನು 'ಜಾನಪದ ಸಾಹಿತ್ಯದ ದರ್ಶನ' ಪುಸ್ತಕ ರೂಪದಲ್ಲಿ ಪ್ರಕಟಿಸುವುದು: ಜನಪದ ವಸ್ತು ಸಂಗ್ರಹಾಲಯ ನಿರ್ಮಿಸುವುದು; ಜನಪದ ಸಾಹಿತ್ಯದ ಕತೆ, ಹಾಡು,

ಒಗಟು, ಒಡಪು, ಬಯಲಾಟ ಇತ್ಯಾದಿ ಸಂಗ್ರಹಿಸಿ ಪ್ರಕಟಿಸುವುದು. ಜಾನಪದದಲ್ಲಿ ಪಿಎಚ್.ಡಿ. ಮಾರ್ಗದರ್ಶನ; ಇತ್ಯಾದಿ ಯೋಜನೆಗಳನ್ನು ಶ್ರದ್ಧೆ-ನಿಷ್ಠೆಯಿಂದ ಕೈಗೊಂಡು ಪೂರ್ತಿಗೊಳಿಸುತ್ತಲೇ ಬಂದರು.

ವಿಶ್ವವಿದ್ಯಾಲಯದ ಪತ್ರಿಕೆ 'ಕರ್ನಾಟಕ ಭಾರತಿ' ಗೆ ಐದು ವರುಷ ತುಂಬಿದ ಸವಿನೆನಪಿಗಾಗಿ ಜಾನಪದ ವಿಶೇಷ ಸಂಚಿಕೆಯನ್ನು ಆರ್.ಸಿ. ಅವರು ಪ್ರಕಟಿಸಿದರು. ಈ ಜಾನಪದ ಸಂಚಿಕೆ, ಜಾನಪದ ಸಮ್ಮೇಲನಕ್ಕೆ ನಾಂದಿಯಾಯಿತೆಂದು ಕೆಲವರು ಹೇಳುತ್ತಾರೆ. ಏನೇ ಆದರೂ ಅದು ಅಂದಿನಿಂದ ಇಂದಿನವರೆಗೆ ಒಂದು ಉತ್ತಮ ಉಪಕ್ರಮವಾಗಿ ಪ್ರತಿವರ್ಷ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಜರುಗುತ್ತಲಿದೆ. ವಿಚಾರಸಂಕಿರಣ, ಜಾನಪದ ಕಲಾಪ್ರದರ್ಶನಗಳನ್ನೊಳಗೊಂಡಿರುವ ಈ ಸಮ್ಮೇಲನದಲ್ಲಿ ಮಂಡಿಸಲಾದ ಪ್ರಬಂಧಗಳು 'ಜನಪದ ಸಾಹಿತ್ಯ ದರ್ಶನ' ಹೆಸರಿನಿಂದ ಪ್ರಕಟವಾಗುತ್ತ ಬಂದಿದೆ. (ಈಚೆಗೆ ವಿಳಂಬವಾಗುತ್ತಿದೆ). ಈ ಗ್ರಂಥಗಳು ಜಾನಪದ ಲೋಕಕ್ಕೆ ಅಪೂರ್ವ ಸಾಮಗ್ರಿಯನ್ನು ಒದಗಿಸುತ್ತಿವೆ.

"ಜನಪದ ಸಾಹಿತ್ಯದಲ್ಲಿ ಕಾವ್ಯದ ಸ್ವರ್ಣರೇಖೆಗಳು ಮಿನುಗುತ್ತಿರುವಂತೆ, ಜನಪದ ಜೀವನದ ಮಿಡಿತ-ಬಡಿತ-ತುಡಿತಗಳೂ ನಿಕ್ಷೇಪಗೊಂಡಿವೆ. ನಮ್ಮ ನಾಡವರ ಸಾಂಸ್ಕೃತಿಕ ಇತಿಹಾಸದ ಜೀವನದ ಪುನರ್ ನಿರ್ಮಾಣದಲ್ಲಿ ಅಂಥ ಸಾಹಿತ್ಯದ ವಿವಿಧ ಮುಖಗಳ ಸಶಾಸ್ತ್ರೀಯ ಅಧ್ಯಯನ ಅವಶ್ಯಕ. ಇದನ್ನು ಮನಗಂಡ ಆರ್.ಸಿ. ಅವರು ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಸಂಶೋಧನೆ ನಡೆಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದ್ದಾರೆ (ಬಿ.ವ್ಹಿ. ಮಲ್ಲಾಪುರ). ತತ್ಫಲವಾಗಿ, ಜನಪದ ಒಗಟುಗಳು, ವಿಮರ್ಶಾತ್ಮಕ ಅಧ್ಯಯನ (ಎಸ್.ಜಿ. ಇಮ್ರಾಪುರ 1978); ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ (ಡಿ.ಎಸ್. ಹಕಾರಿ 1979) ಪ್ರಬಧಗಳು ಆರ್.ಸಿ. ಅವರ ಮಾರ್ಗದರ್ಶನದಲ್ಲಿ ಸಿದ್ಧಗೊಂಡು ವಿ.ವಿ. ದಿಂದ ಸ್ವೀಕೃತವಾಗಿವೆ. ಇವೂ ಆರ್.ಸಿ. ಅವರ 'ಜಾನಪದ ಪ್ರತಿಭೆ' ಯನ್ನು ಅರುಹುತ್ತವೆ. ಜಾನಪದ ಆಸಕ್ತರಿಗೆ – ಜಾನಪದದಲ್ಲಿ ಪಿಎಚ್.ಡಿ. ಮಾಡುವವರಿಗೆ ಸಮರ್ಥ ರೀತಿಯಲ್ಲಿ

ಮಾರ್ಗದರ್ಶನ ನೀಡಿದ್ದಾರೆ. (ಕನ್ನಡದಲ್ಲಿ 37 : ಜಾನಪದದಲ್ಲಿ 2 : ಒಟ್ಟು 39 ಪಿಎಚ್.ಡಿ. ಮಾರ್ಗದರ್ಶನ). ಆರ್.ಸಿ. ಅವರ ಪ್ರಯತ್ನದ ಫಲವಾಗಿ ಜಾನಪದ ವಿಜ್ಞಾನ ಬೋಧನೆ, ಸಂಶೋಧನೆ, ಕ.ಅ. ಪೀಠದಲ್ಲಿ ಜನಪದ ವಿಭಾಗದಲ್ಲಿ ನಿರಂತರ ನಡೆದಿದೆ. ಅನೇಕ ಜಾನಪದ ಸಾಹಿತ್ಯ ಗ್ರಂಥಗಳು ಸಂಶೋಧಿತವಾಗಿ ಪ್ರಕಟಗೊಂಡಿವೆ. ಪಿಎಚ್.ಡಿ. ಅಧ್ಯಯನಗಳೂ ಮುಂದುವರಿದಿವೆ.

ಕನ್ನಡ ಅಧ್ಯಯನ ಪೀಠದಲ್ಲಿ 'ಜಾನಪದ ಸಾಹಿತ್ಯ ಮಾಲೆ' ಯನ್ನು ಆರಂಭಿಸಿದವರೂ ಆರ್.ಸಿ. ಅವರೇ. ಎಲ್.ಆರ್. ಹೆಗಡೆ, ಎಂ.ಎಸ್. ಸುಂಕಾಪುರ ಮೊದಲಾದ ವಿದ್ವಾಂಸರ ಹಲವಾರು ಪ್ರಕಾರದ ಜನಪದ ಸಂಗ್ರಹಗಳು ಈ ಮಾಲೆಯ ಅಡಿಯಲ್ಲಿ ಪ್ರಕಾಶಿತವಾಗಿವೆ. ಜನಪದ ಸಾಹಿತ್ಯ ಶೋಧನೆ ಮತ್ತು ಸಂಗ್ರಹ ಗ್ರಂಥಗಳು ಇವರ ನೇತೃತ್ವದಲ್ಲಿ ಪ್ರಕಟವಾಗಿವೆ. 'ಜೀವನ ಜೋಕಾಲಿ' ಯ ಐದು ಭಾಗಳು; 'ಜಾನಪದ ಸಾಹಿತ್ಯ ದರ್ಶನ' ದ ಆರು ಭಾಗಗಳು; ಶ್ರೀ ಕೃಷ್ಣ ಪಾರಿಜಾತದಂಥ ಸಂಪಾದಿತ ಕೃತಿಗಳು ಇವರು ಮುಖ್ಯಸ್ಥರಾಗಿರುವ ಸಂದರ್ಭದಲ್ಲಿಯೇ ಪ್ರಕಟಗೊಂಡ ಕನ್ನಡ ಅಧ್ಯಯನ ಪೀಠದ ಕೊಡುಗೆಗಳಾಗಿವೆ. 'ಜೀವನ ಜೋಕಾಲಿ' ಮಾಲೆಯಲ್ಲಿ ತ್ರಿಪದಿ, ಹಾಡು, ಲಾವಣಿ, ಕಥನಗೀತೆ, ಸಣ್ಣಾಟ, ದೊಡ್ಡಾಟ ಇತ್ಯಾದಿ ಪ್ರಕಾರಗಳು ಬೆಳಕುಕಂಡಿವೆ.

ಜಾನಪದ ವಸ್ತು ಭಂಡಾರಕ್ಕೆ ಬೇಕಾಗುವ ನೆಲಗಟ್ಟನ್ನು ಆರ್.ಸಿ. ಅವರು ಹಾಕಿಕೊಟ್ಟಿದ್ದಾರೆ. ಅದು ವ್ಯವಸ್ಥಿತವಾಗಿ ರೂಪುಗೊಳ್ಳಬೇಕಾಗಿದೆ. 1983–84 ರಲ್ಲಿ ಅಣ್ಣಿಗೇರಿ, ಗದಗ, ಹುಬ್ಬಳ್ಳಿ, ಶಿರಹಟ್ಟಿ, ಡಂಬಳ, ಗೋಕಾಕ, ಮುಂಡರಗಿ ಮುಂತಾದ ಗ್ರಾಮಗಳಿಂದ ಜಾನಪದ ವಸ್ತುಗಳನ್ನು ಸಂಗ್ರಹಿಸಿ, ವಸ್ತು ಸಂಗ್ರಹಾಲಯವನ್ನು ರೂಪಿಸಲಾಗಿದೆ. ಅದನ್ನು ಅಚ್ಚುಕಟ್ಟಾಗಿ ಬೆಳೆಸುವ ಜವಾಬ್ದಾರಿ ಜಾನಪದ ಅಧ್ಯಯನ ವಿಭಾಗದ ಮೇಲಿದೆ; ಈ ನಿಟ್ಟಿನಲ್ಲಿ ವಿಭಾಗದ ಮುಖ್ಯಸ್ಥೆ ಡಾ। ಶಾಲಿನಿ ರಘುನಾಥ ಭಟ್ಟ ವಿಶೇಷ ಆಸ್ಥೆವಹಿಸಿದ್ದಾರೆ.

1984–85ರಲ್ಲಿ ಜಾನಪದ ಕಲಾತಂಡಗಳನ್ನು ಅಧ್ಯಯನ ಪೀಠಕ್ಕೆ ಆಮಂತ್ರಿಸಿ, ಅವುಗಳ ಸಮಗ್ರ, 'ಅನ್ವಯಿಕ ಅಧ್ಯಯನ' ನಡೆಯಿಸುವ ಉಪಕ್ರಮದ ಹಿಂದಿನ ಚಾಲನಾ ಶಕ್ತಿಯಾಗಿ ಆರ್.ಸಿ. ಯವರಿದ್ದರು.

1981 ರಷ್ಟು ಹಿಂದೆಯೇ ಆರ್.ಸಿ. ಅವರು 'ಜಾನಪದ ಶಬ್ದಕೋಶ', 'ಜಾನಪದ ವಿಶ್ವಕೋಶ' ಕುರಿತು ಮಾತನಾಡಿದ್ದರು. ಜನಜೀವನದಲ್ಲಿ ಇಂದಿಗೂ ಅಸ್ತಿತ್ವದಲ್ಲಿರುವ ಶಬ್ದಭಂಡಾರ, ಮಾತಿನ ರೀತಿ ಇವೆಲ್ಲ ಒಂದೆಡೆ ಸಂಗ್ರಹವಾಗಬೇಕು ಎಂಬ ಆಶಯವನ್ನು ಹೊಂದಿದ್ದರು.

ಜಾನಪದ ಅಭ್ಯಾಸಿಗಳು ಆದ ಆರ್.ಸಿ. ಅವರು ಜಾನಪದಕ್ಕೆ ಸಂಬಂಧಪಟ್ಟ ಅಕಾಡೆಮಿಕ್ ಎಲ್ಲ ಕೆಲಸ ಕಾರ್ಯಗಳ ಜವಾಬ್ದಾರಿ ಹೊತ್ತು, ಅತ್ಯಂತ ಯಶಸ್ವಿಯಾಗಿ ಪೂರೈಸಿದ್ದು, ಅವರ ಕಾರ್ಯಕುಶಲತೆಯನ್ನು ಪ್ರತಿಬಿಂಬಿಸುತ್ತಿದೆ.

ಜನಪದ ಸಾಹಿತ್ಯಾಧ್ಯಯನ ಕುರಿತು...

1973 ರಲ್ಲಿ 'ಅಖಿಲ ಕರ್ನಾಟಕ ಜಾನಪದ ಸಮ್ಮೇಳನವನ್ನು, ಪೀಠದ ಮುಖ್ಯಸ್ಥರಿರುವಾಗಲೇ ಆರ್.ಸಿ. ಅವರು ಅಭೂತಪೂರ್ವವಾಗಿ ಹಮ್ಮಿಕೊಂಡರು. ಸಮ್ಮೇಳನದ ಅಂಗವಾಗಿ ಮೂರು ವಿಚಾರ ಸಂಕಿರಣಗಳನ್ನು, ಜಾನಪದ ಕಲಾಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗಿತ್ತು. ವಿದ್ವಾಂಸರು ಮಂಡಿಸಿದ 20 ಮೌಲಿಕ ಜನಪದ ಪ್ರಬಂಧಗಳನ್ನು 1974ರಲ್ಲಿ 'ಜನಪದ ಸಾಹಿತ್ಯ ದರ್ಶನ–1' ರಲ್ಲಿ ಸಂಪಾದಿಸಿದರು. ಈ ಗ್ರಂಥಕ್ಕೆ ತಾವೇ ಮುನ್ನುಡಿ ಬರೆದಿದ್ದಾರೆ. "ಜಾನಪದ ಸಾಹಿತ್ಯದ ಅಭ್ಯಾಸವು ತೀವ್ರಗತಿಯಿಂದ ನಡೆಯುತ್ತಿದ್ದರೂ ಅದಕ್ಕೆ ಪೋಷಕವಾಗುವ ಸಾಹಿತ್ಯವಿನ್ನೂ ವಿಪುಲವಾಗಿ ಬರಬೇಕಾಗಿದೆ. ಈ 50 ವರ್ಷಗಳಲ್ಲಿ ಜಾನಪದ ಸಾಹಿತ್ಯದ ಕೆಲವು ಸಂಗ್ರಹಗಳು ಹೊರಬಂದಿವೆ. ಈ ಸಂಗ್ರಹಕಾರ್ಯ, ಅಳಿದುಹೋಗುತ್ತಿದ್ದ ಜನಪದ ಸಾಹಿತ್ಯವನ್ನು ಉಳಿಸಿಕೊಂಡು ಬಂದರೂ ಅಲ್ಲಿ ಶಾಸ್ತ್ರದೃಷ್ಟಿಯ ಕೊರತೆಯಿದೆಯೆಂಬುದನ್ನು ನೆನಪಿನಲ್ಲಿಡಬೇಕು. ಮೊದಮೊದಲು ಈ ಸಾಹಿತ್ಯದ

ಮೌನಮುದ್ರೆಯನ್ನೊಡೆದು 'ಗರತಿಯ ಹಾಡು', 'ಮಲ್ಲಿಗೆ ದಂಡೆ' ಗಳಂಥ ಕೆಲವು ಸಂಕಲನಗಳು ಸಾಹಿತ್ಯದ ಉನ್ನತಮಟ್ಟದಲ್ಲಿ ನಿಂತರೂ ಒಟ್ಟಿನಲ್ಲಿ ಅವುಗಳ ವಿವಿಧ ಪ್ರಾದೇಶಿಕ ರೂಪ, ಅಲ್ಲಿ ಕಾಣುವ ವ್ಯತ್ಯಾಸ, ಅವುಗಳ ಮೂಲ ಸಂವೇದನೆ, ಈ ಕಾರ್ಯ ಆಗದೇ ಉಳಿಯಿತು; ಇನ್ನೂ ಉಳಿದಿದೆ. ಇದುವರೆಗೆ ಜಾನಪದ ಸಾಹಿತ್ಯದ ಹೆಸರಿನಲ್ಲಿ ಕೆಲವು ಹಾಡುಗಳು ಮಾತ್ರ ಪ್ರಕಟವಾಗಿದ್ದರೆ, ಆ ಸಾಹತ್ಯದ ವ್ಯಾಪ್ತಿ ಇನ್ನೂ ಅಪಾರವಾಗಿದೆ. ಕತೆ, ಒಡಪು, ಒಗಟು, ನಾಣ್ಣುಡಿ, ಜಾಣ್ಣುಡಿ, ಮುಂತಾದವುಗಳೆಲ್ಲ ಜನಪದ ಸಾಹಿತ್ಯದ ಕಕ್ಷೆಯಲ್ಲಿ ಬರುತ್ತವೆ. ಜನಪದವನ್ನು ಕೇವಲ ಸಾಹಿತ್ಯ ದೃಷ್ಟಿಯಿಂದ ಇಲ್ಲಿಯವರೆಗೆ ನೋಡಿದರೆ, ಅದನ್ನು ಸಮಾಜಶಾಸ್ತ್ರ, ಮಾನವಿಕ ಶಾಸ್ತ್ರ, ಭಾಷಾ ಶಾಸ್ತ್ರಗಳ ದೃಷ್ಟಿಯಲ್ಲಿ ನೋಡುವುದು ಅವಶ್ಯವೆನಿಸಿದೆ. ಜನಸಾಮಾನ್ಯರು ಕೇವಲ ಒಂದು ವಿಶಿಷ್ಟ ಪ್ರದೇಶ, ಜನಾಂಗಗಳಿಗೆ ಸಂಬಂಧಪಟ್ಟವರಾದರೂ ಯಾವ ನಾಗರಿಕತೆಯ ಉಪಾಧಿಗಳಿಗೂ ಪಕ್ಕಾಗದ ಅವರ ವಿಚಾರ, ನಡೆ, ನುಡಿಗಳು, ವಿಶ್ವಮೂಲವಾದವುಗಳು. ಆದುದರಿಂದ ಒಂದು ಪ್ರದೇಶದ ಜನಪದ ಸಾಹಿತ್ಯದಲ್ಲಿ ಕಂಡುಬರುವ ಭಾವ, ಆದೇಶ, ಆಶಯುಗಳು ಮೂಲಮಾನವನಿಗೆ ಸಂಬಂಧಪಟ್ಟವು. ವಿಶ್ವಮಾನವನಾಗಬೇಕಾದವನು ಇವನ್ನೆಲ್ಲ ಅರಿದು, ಒರೆದು ನೋಡಬೇಕಾಗುತ್ತದೆ. ಈ ತೌಲನಿಕ ದೃಷ್ಟಿಯುಲ್ಲಿ ಜನಪದ ಸಾಹಿತ್ಯದ ಸಂಸ್ಕರಣ, ಪ್ರಕಟನೆಯು ನಡೆಯಬೇಕಾಗುತ್ತದೆ, ಎಂದು ಜನಪದ ಸಾಹಿತ್ಯ ಅಧ್ಯಯನ ಕುರಿತಾಗಿ ಆಗಬೇಕಾದ ಕಾರ್ಯಗಳ ಬಗೆಗೆ ತುಂಬ ಮೌಲಿಕ ವಿಚಾರಗಳನ್ನು ಹೇಳಿದ್ದಾರೆ. ಈ ವಿಚಾರಗಳ ತಳಹದಿಯ ಮೇಲೆಯೇ ಇಂದು ಜಾನಪದ ಸಾಹಿತ್ಯಾಧ್ಯಯನ ಸಾಕಷ್ಟು ಬೆಳವಣಿಗೆಯನ್ನು ಕಂಡಿದೆ.

ಕನ್ನಡ ಜನಪದ ಸಾಹಿತ್ಯದ ಇತಿಹಾಸ ....

ಪ್ರಾಚೀನ ಕನ್ನಡ ಸಾಹಿತ್ಯದ ಮೇಲೆ ಆರ್.ಸಿ. ಅವರು ಪ್ರಭುತ್ವ ಸಾಧಿಸಿದ್ದರು. ಹಳಗನ್ನಡ ಪದ್ಯಗಳು ಅವರಿಗೆ ಮುಖೋದ್ಗತವಾಗಿದ್ದವು. ಇತ್ತ ಜಾನಪದ ಸಾಹಿತ್ಯವನ್ನು ತಿಳಿದವರಾದುದರಿಂದ ಪ್ರಾಚೀನ ಕನ್ನಡ

ಸಾಹಿತ್ಯದಲ್ಲಿ ಅಡಕಗೊಂಡಿರುವ ಜಾನಪದ ಅಂಶಗಳನ್ನು ಅನ್ವೇಷಿಸಿ, ಲೇಖನಗಳನ್ನು ಬರೆದರು. ಈ ನಿಟ್ಟಿನಲ್ಲಿ 'ಕನ್ನಡ ಜನಪದ ಸಾಹಿತ್ಯದ ಇತಿಹಾಸ' ಎಂಬ ಲೇಖನ ಗಮನಾರ್ಹವಾದುದು. "ಶಾಬ್ದಿಕವಾಗಿ ಹೊರಹೊಮ್ಮಿದ ಸಾಹಿತ್ಯಕ್ಷೇತ್ರದಲ್ಲಿ ಮೊದಲು ತಲೆಯೆತ್ತಿದುದು ಜಾನಪದ ಸಾಹಿತ್ಯ. ವೈಯುಕ್ತಿಕತೆ ಅಳಿದು ಸಾರ್ವತ್ರಿಕ ಸ್ವರೂಪವನ್ನು ತಾಳಿ ಈ ಜಾನಪದ ಸಾಹಿತ್ಯವಾಗುತ್ತದೆ. ಅದರ ಕರ್ತೃ ಸಮಷ್ಟಿಯಲ್ಲಿ ಮರೆತುಹೋಗಿ, ಅದು ಲಿಖಿತವಲ್ಲದ ಅಲೇಖಶೂನ್ಯವಾಗಿ ಬದುಕುತ್ತದೆ. ಜನತೆಯ ನಾಲಗೆಯೇ ಅದಕ್ಕೆ ತೂಗುದೊಟ್ಟಿಲವಾಗಿ ಬೆಳೆದು ಬಂದಿತು. ಶಿಷ್ಟ ಕವಿಗಳು ಮಾತ್ರ ಸಾವಿರ ವರುಷಗಳಿಂದ ಜನಪದ ಸಾಹಿತ್ಯವನ್ನು ಕಡೆಗಣಿಸಿದುದುಂಟು. ಈ ಸಾಹಿತ್ಯಕ್ಕೆ ಲಿಪಿರೂಪದ ಇತಿಹಾಸವಿಲ್ಲದಿದ್ದರೂ ಸುಮಾರು 3000 ವರುಷಗಳ ಚರಿತ್ರೆಯುಳ್ಳ ಕನ್ನಡ ಭಾಷೆಗೆ ಜನಪದ ಸಾಹಿತ್ಯದ ಅಪೂರ್ವ ಪರಂಪರೆಯಿದೆಯೆಂದು ಆರ್.ಸಿ. ಅವರು ಸರಿಯಾಗಿಯೇ ಗುರುತಿಸುತ್ತಾರೆ.

"ಅರಮನೆಯ ಪರಿವಾರದಲ್ಲಿ ಶಿಷ್ಟ ಸಾಹಿತ್ಯ, ಗ್ರಾಮೀಣರ ಮಧ್ಯದಲ್ಲಿ ಜನಪದ ಸಾಹಿತ್ಯ ಸಮಾಂತರ ರೂಪದಲ್ಲಿಯೇ ಸಾಗಿಬಂದುವು. ಗ್ರಾಮಜೀವನದಲ್ಲಿ ಜೀವಂತ ತೊರೆಯಾಗಿ ಹರಿದು ಬಂದ ಈ ಕನ್ನಡ ಜನಪದ ಸಾಹಿತ್ಯದ ಪ್ರಾಚೀನ ಉಲ್ಲೇಖಗಳು ಕವಿರಾಜಮಾರ್ಗ, ಧರ್ಮಾಮೃತ, ವಡ್ಡಾರಾಧನೆ, ಪಂಪಭಾರತ ಶಬ್ದಮಣಿದರ್ಪಣ, ಪಂಚತಂತ್ರ, ಲೀಲಾವತಿ, ತ್ರಿಷಷ್ಟಿ ಪುರಾತನ ಚಾರಿತ್ರ, ಉದ್ಭಟಕಾವ್ಯ, ಬಸವಪುರಾಣ, ರಾಜಶೇಖರ ವಿಳಾಸ, ಗದಾಯುದ್ಧ, ಮಾನಸೋಲ್ಲಾಸ (ಸೋಮೇಶ್ವರ) ಸಿದ್ಧರಾಮ ಪುರಾಣ, ನೇಮಿನಾಥ ಪುರಾಣ, ಸಮಯ ಪರೀಕ್ಷೆ, ಪಾರ್ಶ್ವನಾಥ ಪುರಾಣದಂಥ ಸಾಹಿತ್ಯ ಕೃತಿಗಳಲ್ಲಿ, ಬಸವಣ್ಣನವರ ವಚನಗಳು, ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ ಮೊದಲ್ಗೊಂಡು ಇಂದಿನವರೆಗೆ ದೊರಕುತ್ತವೆಂದು ವ್ಯಾಪಕ ಅಧ್ಯಯನದ ಹಿನ್ನೆಲೆಯಲ್ಲಿ ಆರ್.ಸಿ. ಅವರು ಸ್ಪಷ್ಟಪಡಿಸುತ್ತಾರೆ.

ಕವಿರಾಜ ಮಾರ್ಗದಲ್ಲಿ ಉಕ್ತವಾದ ಚತ್ತಾಣ, ಬೆದಂಡೆಗಬ್ಬ, ಪಗರಣ ಮುಂತಾದವು ಜನಪದ ಸಾಹಿತ್ಯ ಪ್ರಕಾರಗಳೇ ಎಂಬುದನ್ನು ಆಧಾರ ಸಹಿತ ವಿವರಿಸುತ್ತಾರೆ. 'ಓವನಿ' ಗೆ (ಕೇರುವ, ಕುಟ್ಟುವ, ಬೀಸುವ ಹಾಡು), ಒನಕೆವಾಡು ಮುಂತಾದ ಜನಪದ ಸಾಹಿತ್ಯ ಪ್ರಕಾರಗಳನ್ನು ಶಾಸನ-ಕಾವ್ಯಾಧಾರಗಳಿಂದ ಎತ್ತಿ ತೋರಿಸುತ್ತಾರೆ. "ಧವಲ' (ವಿವಾಹ ಸಂದರ್ಭದಲ್ಲಿ ಸುಮಂಗಲೆಯರು ಹಾಡುವ ಗೀತೆ), ಆಣಿಪೀಣಿ (ಅಂಟಿಗೆ ಪಂಟಿಗೆ) ಇತ್ಯಾದಿ ಜನಪದ ಗೀತ ಪ್ರಕಾರಗಳನ್ನು ಪ್ರಾಚೀನ ಕಾವ್ಯೋಲ್ಲೇಖಗಳ ಆಧಾರದಿಂದ ಗುರುತಿಸಿ ವಿವರಿಸುತ್ತಾರೆ. ಜೋಕುಮಾರನ ಹಾಡಿನ ಪ್ರಾಚೀನ ಉಲ್ಲೇಖಗಳನ್ನು ಎತ್ತಿ ತೋರಿದ್ದಾರೆ. ಗೊಂದಲಿಗರ ಹಾಡಿನ ಪ್ರಾಚೀನತೆ-ಯಕ್ಷಗಾನ (ಎಕ್ಕಲಗಾಣ) ದ ಪ್ರಾಚೀನತೆ ಕುರಿತೂ ಆರ್.ಸಿ. ಅವರು ಚರ್ಚಿಸಿದ್ದಾರೆ. ಜಾನಪದ ಅಭ್ಯಾಸಿಗಳಿಗೆ ಉಪಯುಕ್ತ ಮಾಹಿತಿಯನ್ನು ಈ ಮೂಲಕ ನೀಡಿದ್ದಾರೆ.

"ಜಾನಪದ ಸಾಹಿತ್ಯ ಲಾವಣಿ, ದುಂದುಮೆ, ಡೊಳ್ಳಿನ ಹಾಡು, ಮಂಗಲ ಪ್ರಸಂಗದ ಹಾಡು, ಶ್ರಮಸಂದರ್ಭದ ಹಾಡು ಮುಂತಾದ ರೂಪಗಳಲ್ಲಿ ಈಗ ವಿಪುಲವಾಗಿ ಉಪಲಬ್ಧವಾಗುತ್ತದೆ. ಇವುಗಳ ಉಗಮ, ವಿಕಾಸ, ಅಭ್ಯಾಸ ನಡೆಯಬೇಕಾದುದು ಅತ್ಯವಶ್ಯ. ಒಂದೆರಡು ಶತಮಾನಗಳ ಹಿಂದೆ ಬೆಳಗಿಹೋದ ಕಿತ್ತೂರು, ಬೆಳವಡಿ, ನರಗುಂದ, ಸುರಪುರ, ಕೆಳದಿ, ಶ್ರೀರಂಗಪಟ್ಟಣ - ಈ ಸಾಮ್ರಾಟ ಸಾಮಂತರ ಶೌರ್ಯ ಸಾಹಸಗಳನ್ನು ವಿವರಿಸುವ ಸಂದರ್ಭದಲ್ಲಿ ಲಾವಣಿ, ದುಂದುಮೆ ರೂಪದ ಸಾಹಿತ್ಯ ಬಹಳ ಜನಪ್ರಿಯವಾಗಿದ್ದಂತೆ ತೋರುತ್ತದೆ. ಇದರಂತೆ ಕನ್ನಡಿಗರ ಮಾನನಿಧಿಯೆನಿಸಿದ ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ, ಮನೆತನಗಳ ಮಹಾದೊರೆಗಳನ್ನು ಕುರಿತು ಅಂದಿನ ಜಾನಪದ ತನ್ನ ಮಾನಸೋಲ್ಲಾಸವನ್ನು ಶಾಬ್ದಿಕವಾಗಿ ವ್ಯಕ್ತಮಾಡಿರಬೇಕು ಎಂದು ತಮ್ಮ ತಾರ್ಕಿಕ ನಿಲುವನ್ನು ಬಿಚ್ಚಿಡುತ್ತಾರೆ. ಅಲ್ಲದೆ ಆ ಜಾನಪದ ಸಾಹಿತ್ಯ ಯಾವ ಯಾವ ಕವಿಗಳಿಗೆ ವಸ್ತುವಾಯಿತೋ, ಪ್ರೇರಣೆ ನೀಡಿತೋ ಅದರ ಬಗೆಗೆ ಕಾಲ ಮೌನವಾಗಿದೆ' ಎಂದೆನ್ನುತ್ತಲೇ ಕೆಲ ಹಸ್ತಪ್ರತಿಗಳಲ್ಲಿ

ಪರನಾರೀ ಸೋದರ ಕುಮಾರರಾಮ, ಕನ್ನಡ ಕಲಿ ಸಿರುಮ ಮೊದಲಾದವರನ್ನು ಕುರಿತು ಒಂದೆರಡು ಜಾನಪದ ಕಾವ್ಯಗಳು ಸಿಗುವುದು ನಮ್ಮ ಪುಣ್ಯವೆಂದು ಅಲ್ಪತೃಪ್ತರಾಗಬಯಸುತ್ತಾರೆ. ಕೊನೆಯಲ್ಲಿ ಅವರು ಹೇಳುವುದಿಷ್ಟು : "ಜಾನಪದ ಸಾಹಿತ್ಯದ ಆಳ, ಅಗಲ ಮತ್ತು ಎತ್ತರಗಳ ಅರಿವು ನಮ್ಮನ್ನು ದಿಗ್ಭ್ರಮೆಗೊಳಿಸುತ್ತಿದೆ. ಜಾನಪದ ಜೀವನದ ಪ್ರತಿಯೊಂದು ಅಂಶವೂ ಸಾಹಿತ್ಯಕವಾಗಿ ಹೊರಹೊಮ್ಮಿದೆ. ಅವರ ಜೀವನದ ಶ್ರೀಮಂತಿಕೆ, ಮೌಲ್ಯಗಳು, ಸುಖದುಃಖಗಳು, ಆಶೆ ಆಕಾಂಕ್ಷೆಗಳು, ಅನಿಸಿಕೆ ಆಲೋಚನೆಗಳು ಜಾನಪದ ಪರಿಭಾಷೆಯಲ್ಲಿಯೇ ಹೇಳುವುದಾದರೆ ಅಬ್ಬರಿಸಿ ಗಂಗೆ ಹರಿದಂತೆ' ವ್ಯಕ್ತಗೊಂಡಿವೆ.

"ಪಂಪ, ರನ್ನ, ವಚನಕಾರರು, ದಾಸರು, ಹರಿಹರ, ರಾಘವಾಂಕ, ಕುಮಾರವ್ಯಾಸ, ಚಾಮರಸ, ಸರ್ವಜ್ಞರಲ್ಲದೆ, 20ನೇ ಶತಮಾನದ ನವೋದಯ ಕವಿಗಳಿಗೆ ಸ್ಫೂರ್ತಿಯನ್ನಿತ್ತುದು ಜಾನಪದ ಸಾಹಿತ್ಯವೇ. ಅವಳ ತೊಡಿಗೆಯನ್ನು ಇವಳಿಗಿಡಿಸುವಾಗ ಅಂಬಿಕಾತನಯದತ್ತ, ಆನಂದ ಕಂದ, ಮಧುರಚೆನ್ನ, ಜಿ.ಪಿ. ರಾಜರತ್ನಂ, ಮೊದಲಾದವರು ದೇಸೀಯ ಬಂಗಾರವನ್ನೇ ಬಳಸಿದರು. ಇತ್ತೀಚಿನ ನವ್ಯ ಕವಿಗಳಿಗಂತೂ ದೇಸೀ ಹುಚ್ಚು. ಜನಪದ ಜೀವನ, ಮಾತು, ನಡೆನುಡಿ, ಎಲ್ಲವೂ ನವ್ಯ ಸಾಹಿತ್ಯದಲ್ಲಿ ಸಮೀಕರಣಗೊಳಿಸಿಕೊಳ್ಳಬೇಕೆಂಬುದು ಅವರ ಆಶಯ" ವೆಂದು ಆರ್.ಸಿ. ಅವರು ತುಂಬ ಮಾರ್ಮಿಕವಾಗಿ ಅಷ್ಟೇ ಅರ್ಥವತ್ತಾಗಿ ಲೇಖನದಲ್ಲಿ ಬರೆದುದು ಜನಪದ ಸಾಹಿತ್ಯದ ಇತಿಹಾಸ ಕುರಿತು ಅಧ್ಯಯನಿಸುವವರಿಗೆ ನಿಜಕ್ಕೂ ಸಾಕಷ್ಟು ಆಕರಸಾಮಗ್ರಿ ಲಭ್ಯವಾಗುತ್ತದೆ. ಆರ್.ಸಿ. ಅವರ ಅಮೂಲ್ಯವಾದ ಜನಪದ ಸಂಶೋಧನ ಲೇಖನವಿದು.

ಜಾನಪದ ಸಮ್ಮೇಲನದ ಸರ್ವಾಧ್ಯಕ್ಷತೆ :

ಬೆಳಗಾವಿಯಲ್ಲಿ ಜರುಗಿದ 12ನೇ ಅಖಿಲ ಕರ್ನಾಟಕ ಜಾನಪದ ಸಮ್ಮೇಲನದ ಸರ್ವಾಧ್ಯಕ್ಷರಾಗಿ ಡಾ। ಆರ್.ಸಿ. ಹಿರೇಮಠ ಅವರು ಜಾನಪದ ಕುರಿತಾಗಿ ಹಲವು ಮಹತ್ವದ ವಿಚಾರಗಳನ್ನು ಮಂಡಿಸಿದರು. ಅವರ ಅಧ್ಯಕ್ಷೀಯ ಭಾಷಣದ ಸಾರ ಇಂತಿದೆ: ಶಿಷ್ಟ ಸಾಹಿತ್ಯಕ್ಕೆ ಜನಪದ

ಸಾಹಿತ್ಯ ನೆಲೆಯಾದುದನ್ನು ನಿದರ್ಶನಗಳೊಂದಿಗೆ ವಿವರಿಸುತ್ತಾರೆ. "ನಮ್ಮ ಅನೇಕ ಮಹಾಕಾವ್ಯ ವಸ್ತುಗಳು ಜನತೆಯ ಬಾಯಿಂದ ಬಾಯಿಗೆ ಕರ್ಣೋಪಕರ್ಣೋಪವಾಗಿ ಬಂದ ಕಥೆಗಳಾಗಿವೆ. ಇತಿಹಾಸವೆನಿಸಿದ ರಾಮಾಯಣ, ಮಹಾಭಾರತಗಳು ಇದಕ್ಕೆ ನಿದರ್ಶನವೆನಿಸಿವೆ. ಅವು ಮೊದಲು ಜನಪದ ವಸ್ತುಗಳಾಗಿದ್ದವೆಂದು ಸಂಶೋಧಕರ ಮತ. ಮಹಾಕವಿಗಳು ಜಾನಪದ ವಸ್ತು, ಕಲ್ಪನೆ, ಭಾವನೆ, ಆಲೋಚನೆಗಳನ್ನೆತ್ತಿಕೊಂಡುದಕ್ಕೆ ವಿಫುಲ ನಿದರ್ಶನಗಳಿವೆ. ಪಂಪನ 'ವಿಕ್ರಮಾರ್ಜುನವಿಜಯ' ದಲ್ಲಿಯ ಭಾವ ಭಾಷೆಗಳಲ್ಲಿ ಜಾನಪದದ ಜೀವ ತುಂಬಿ ತುಳುಕುತ್ತದೆ. ಮುಂದೆ ಬಂದ ಬಸವಾದಿ ಪ್ರಮಥರಿಗೆ ಶ್ರೀ ಸಾಮಾನ್ಯನೇ ಕೂಡಲ ಸಂಗಮನಾಥನೆನಿಸಿದನು. ಶಿವಶರಣರ ಜೀವನದ ಸಮಗ್ರ ಹೋರಾಟ ಆತನ ಮೃಣ್ಮಯ ಬದುಕನ್ನು ಚಿನ್ಮಯಗೊಳಿಸುವುದಕ್ಕಾಗಿ ನಡೆದಿದೆ. "ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ, ಚಿಕ್ಕಯ್ಯನೆಮ್ಮಯ್ಯ ಕಾಣಿರೊ" ಎಂದು ಸಾರಿ ಸಮಾಜದ ಕೊನೆಯ ಸ್ತರದಲ್ಲಿದ್ದವರನ್ನು 'ಹಿರಿಯ ಕುಲದ ಮಹೇಶ್ವರ' ರೆಂದು ಶಿರದ ಮೇಲಿಟ್ಟುಕೊಂಡರು ಶಿವಶರಣರು. ಅದೊಂದು ಅದ್ಭುತ ಸಾಮಾಜಿಕ ಕ್ರಾಂತಿ. ಆ ಕ್ರಾಂತಿಯಲ್ಲಿ ಜಾನಪದ ಬದುಕು ಸಾಹಿತ್ಯದ ತುತ್ತತುದಿಗೇರಿತು. ವಚನಸಾಹಿತ್ಯದ ಮೂಲಪ್ರಣವ ಜಾನಪದದಲ್ಲಿದೆ. ಹರೀಶ್ವರ ರಾಘವಾಂಕರು ಈ ಕ್ರಾಂತಿಯನ್ನು ಮುಂದುವರಿಸಿ, ಮಹಾಕಾವ್ಯದ ಸೀಮೆಗೆ ತಂದರು. ಜಾನಪದ ಜೀವನಕ್ಕೆ ಭಾವಭಾಷೆಗಳಿಗೆ ಅವರು ಕಾವ್ಯದೀಕ್ಷೆಯಿತ್ತರು ಎಂದು ಆರ್.ಸಿ. ಅವರು ಗುರುತಿಸುತ್ತಲೇ ಶಿಷ್ಟ ಸಾಹಿತ್ಯ ಯಾವಾಗಲೂ ಜನಪದ ಸಾಹಿತ್ಯಕ್ಕೆ ಋಣಿಯಾಗಿರಬೇಕೆಂಬುದನ್ನು ಸೂಚ್ಯವಾಗಿ ತಿಳಿಸುತ್ತಾರೆ. ಶಿಷ್ಟ-ಜನಪದಗಳಲ್ಲಿಯ ಈ ಕೊಡು-ಪಡೆ ಸಂಬಂಧವನ್ನು ಅನುಲಕ್ಷಿಸಿ ಅದರಲ್ಲಿಯೂ ಶಿಷ್ಟರಿಂದ ಜನಪದ ಪಡೆದುದಕ್ಕಿಂತಲೂ ಕೊಟ್ಟುದೇ ಹೆಚ್ಚು. ಇದನ್ನು ನೆಮ್ಮಿಕೊಂಡೇ ಮತ್ತು ಆರ್.ಸಿ. ಅವರ ಮೇಲಿನ ವಿಚಾರಗಳನ್ನು ಆಧರಿಸಿಯೇ ಅಧ್ಯಯನ ಮಾಡಿ, 'ವಚನಗಳಲ್ಲಿ ಜಾನಪದೀಯ ಅಂಶಗಳು' (ಡಾ।ಸಿ.ಕೆ. ನಾವಲಗಿ); 'ದಾಸ ಸಾಹಿತ್ಯದಲ್ಲಿ

ಜಾನಪದೀಯ ಅಂಶಗಳು' (ಡಾ। ಆರ್. ಸುನಂದಮ್ಮ); 'ಸರ್ವಜ್ಞನ ವಚನಗಳಲ್ಲಿ ಜಾನಪದ ಅಂಶಗಳು' ಇತ್ಯಾದಿ ಪಿಎಚ್.ಡಿ. ಪ್ರಬಂಧಗಳು ಬಂದುವು. ಪ್ರಾಚೀನ ಸಾಹಿತ್ಯ ಮೊದಲ್ಗೊಂಡು ಆಧುನಿಕ ಸಾಹಿತ್ಯದಲ್ಲಿ ಬಳಕೆಯಾದ ಜಾನಪದ ಅಂಶಗಳನ್ನು ಗುರುತಿಸುವ ಕೆಲವಾರು ಲೇಖನಗಳು – ಹಲವು ಪುಸ್ತಕಗಳೂ ಪ್ರಕಟವಾಗಿದೆ.

'ಜಾನಪದ ಕೇವಲ ಸಾಹಿತ್ಯಕ್ಕೆ ಮಾತ್ರ ಮೀಸಲಾಗಿಲ್ಲ. ಅದು ಸಾಹಿತ್ಯದ ಎಲ್ಲೆಯನ್ನು ಮೀರಿ 'ಅತ್ಯತಿಷ್ಠದ್ದಶಾಂಗುಲ' ವಾಗಿ ಚೆಲ್ಲವರಿದಿದೆ. ಮಾನವವಿಜ್ಞಾನ, ಮನೋವಿಜ್ಞಾನ ಮುಂತಾದ ಕ್ಷೇತ್ರಗಳನ್ನು ಅದು ಆವರಿಸಿ ನಿಂತಿದೆ ಎಂದು ಅದರ ವ್ಯಾಪಕತೆಯನ್ನು ತಿಳಿಸುತ್ತ ಆರ್.ಸಿ. ಅವರು 'Folklore' ಎಂದರೆ The Lore that belongs to the Folk. ಆದುದರಿಂದ ಜನಪದ ಅಥವಾ ಜಾನಪದ ಶಬ್ದದ ವಿಶೇಷಣ ರೂಪದಿಂದ ಈ ಅರ್ಥವನ್ನು ಸಾಧಿಸಿಕೊಳ್ಳುವುದು ಶಾಸ್ತ್ರಸಮ್ಮತ. ಕಾರಣ ಜಾನಪದೀಯ ಅಥವಾ 'ಜನಪದೀಯ' ಎಂಬ ಪದ 'Folk-lore' ಎಂಬುದಕ್ಕೆ ಸರಿಯಾದ ಸಂವಾದಿಯಾಗಬಲ್ಲುದು ಎಂದು ತಮ್ಮ ಅಭಿಪ್ರಾಯ ಮಾಡಿಸಿದ್ದಾರೆ.

'ಜನಪದೀಯ ಸಂಶೋಧನ ಇನ್ನೂ ವ್ಯಾಪಕವಾಗಿ ನಡೆಯಬೇಕು... ಶಿಷ್ಟ–ಸಾಹಿತ್ಯದೊಡನೆ ಜನಪದ ಸಾಹಿತ್ಯ ಅಧ್ಯಯನವೂ ನಡೆಯಬೇಕು.... ಜನಪದ ಆಚಾರವಿಚಾರಗಳನ್ನು ಸಂಗ್ರಹಿಸಿ, ಮಥಿಸಿ, ಅದರ ನಿಜಸ್ವರೂಪವನ್ನು ಕಾಣುವ ಉದ್ದೇಶದಿಂದ ಈ ಅಧ್ಯಯನವನ್ನು ಪ್ರಾರಂಭಿಸಲಾಗಿದೆ. ಒಂದೆರಡು ದಶಕಗಳಲ್ಲಿ ಸಂಗ್ರಹಕಾರ್ಯ ತೃಪ್ತಿಕರವಾಗಿ ಸಾಗಿದೆ. ವಿಚಾರಮಂಥನ, ತೌಲನಿಕ ಅಧ್ಯಯನ ಆಳ–ಅಗಲಗಳಲ್ಲಿ ಹೆಚ್ಚಾಗಿ ನಡೆಯಬೇಕು. ಅದರಿಂದ ಜಾನಪದ ಅಧ್ಯಯನಕ್ಕೆ ಹೆಚ್ಚು ಕೆಚ್ಚುಬರುತ್ತದೆ ಎಂದು ಅಭಿಪ್ರಾಯಿಸಿದ್ದಾರೆ. ಈ ಅಭಿಪ್ರಾಯ ರೂಪದ ಸೂಚನೆಗಳು ಜಾನಪದ ಅಧ್ಯಯನಕಾರರಿಗೆ ಮಾರ್ಗದರ್ಶಿಯಾದುದನ್ನು ಅಲ್ಲಗಳೆಯಲಾಗದು.

'ಜನಪದ ಸಮ್ಮೇಲನಗಳಲ್ಲಿ ಇಡೀ ದಿನ ವಿಚಾರ–ವಿಮರ್ಶೆಗಳ

ಸಂಕಿರಣ ನಡೆದರೆ, ಸಂಜೆಗೆ ಜಾನಪದ ರಂಗದರ್ಶನ ನಡೆಯುತ್ತದೆ. ಅಳಿದುಹೋಗುತ್ತಿರುವ ಕಲೆಗಳಿಗೆ ವಿಶ್ವವಿದ್ಯಾಲಯವು ಜೀವಕಳೆಯನ್ನೀಯುತ್ತಿದೆ... ತೊಗಲು ಗೊಂಬೆಯಾಟ ನಮ್ಮ ರಂಗಭೂಮಿಯ ಮೂಲಮಾತೃಕೆ. ಅದರ ಕಲಾವಿದರು ಇಂದು ವಿರಳ. ಇಂಥ ಕಲೆಯ ಪ್ರಾಯೋಗಿಕ ಅಭ್ಯಾಸವನ್ನು ನಡೆಸಲಾಗಿದೆ. ಪ್ರತಿವರ್ಷ ನಾಡಿನ ನಾನಾ ಭಾಗದ ಜಾನಪದ ವಿದ್ವಾಂಸರು ವಿಚಾರಪೂರಿತ ಪ್ರಬಂಧ ಮಂಡಿಸಿ ಚರ್ಚಿಸುತ್ತಾರೆ. ಅವು ಗ್ರಂಥ ರೂಪದಲ್ಲಿ ಪ್ರಕಟವಾಗುತ್ತವೆ. ಈ ಗ್ರಂಥಗಳು ಜಾನಪದ ಕ್ಷೇತ್ರದಲ್ಲಿ ಮೈಲುಗಲ್ಲಾಗಿವೆ. ರಂಗದರ್ಶನಕ್ಕಾಗಿ ನಾಡಿನ ಮೂಲೆಮೂಲೆಗಳಿಂದ ಕಲಾವಿದರನ್ನು ಕರೆಸಲಾಗುತ್ತದೆ. ಎಂದು ಜಾನಪದ ಕೈಂಕರ್ಯದ ರೂಪುರೇಷೆಯನ್ನೇ ನುಡಿದ್ದಾರೆ ಆರ್.ಸಿ. ಅವರು.

'ಸಮ್ಮೇಲನಗಳ ನಿರ್ವಹಣೆಗೆ 50 ಸಾವಿರ ರೂಪಾಯಿಗಳಷ್ಟಾದರೂ ಹಣ ಬೇಕಾಗಬಹುದು. ವಿಚಾರ ಸಂಕಿರಣಕ್ಕೆ ಯು.ಜಿ.ಸಿ. ಇಲ್ಲದೆ ಐಸಿಎಸ್ಎಸ್ಆರ್' ಇವುಗಳನ್ನು ಕೇಳಿಕೊಳ್ಳಬೇಕು. ರಾಜ್ಯ ಸರಕಾರ ಈ ಹಣವನ್ನು ವಿಶೇಷ ಅನುದಾನವಾಗಿ ಕೊಡಬೇಕು. ಇವು ಸಫಲವಾದರೆ ಸರಿ, ಇಲ್ಲವಾದರೆ ಇದುವರೆಗೆ ಉದಾರಭಾವನೆಯನ್ನು ತೋರಿದ ವಿಶ್ವವಿದ್ಯಾಲಯ ತನ್ನ ಔದಾರ್ಯವನ್ನು ಮುಂದುವರಿಸಿ ಈ ಧನಸಹಾಯವನ್ನು ನೀಡಬೇಕೆಂದು ಆರ್.ಸಿ. ಅವರು ಮನವಿ ಮಾಡಿಕೊಂಡಿದ್ದಾರೆ. ನಿಜವಾದ ಜಾನಪದ ವಿದ್ವಾಂಸನಲ್ಲಿರಬೇಕಾದ, ಜಾನಪದದ ಬಗೆಗಿನ ಗೌರವವನ್ನು ಕಾಳಜಿಯನ್ನು ಇದು ಅರುಹುತ್ತದೆ. ಆರ್.ಸಿ. ಅವರ ಈ ಅಧ್ಯಕ್ಷೀಯ ಭಾಷಣವನ್ನು ಓದಿದಾಗ – ಜನಪದ ಭವಿಷ್ಯತ್ತನ್ನು ಕುರಿತು ಚಿಂತನೆ ಮಾಡಿದ ಮಹಾನ್ ಚಿಂತಕರಲ್ಲಿ ಇವರು ಪ್ರಮುಖರೆಂದು ತೋರುತ್ತದೆ.

ಪ್ರಶಸ್ತಿ–ಸ್ಥಾನಮಾನ–ಗೌರವ

ಡಾ| ಆರ್.ಸಿ. ಹಿರೇಮಠ ಅವರ ಜಾನಪದ ಸೇವೆಯನ್ನು ಗುರುತಿಸಿ, 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ' ಅಕಾಡೆಮಿಯು ಪ್ರಶಸ್ತಿಯನ್ನಿತ್ತು

ಗೌರವಿಸಿದೆ (1995). ಕ.ವಿ.ವಿ. ತನ್ನ 12ನೇ ಅ.ಕ.ಜಾ.ಸಮ್ಮೇಲನದ ಸರ್ವಾಧ್ಯಕ್ಷರನ್ನಾಗಿ ನಿಯೋಜಿಸಿ ಆರ್.ಸಿ. ಅವರಿಗೆ ಗೌರವಸಲ್ಲಿಸಿದೆ. ಇವರ ಶಿಷ್ಟಪದ ಸಾಹಿತ್ಯ ಸೇವೆಗಾಗಿ ರಾಜ್ಯ ಸಾಹಿತ್ಯ ಅಕಾಡೆಮಿ ಸನ್ಮಾನ ನೀಡಿದೆ (1970). ಹುಬ್ಬಳ್ಳಿಯಲ್ಲಿ ಜರುಗಿದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ಕ.ಸಾ.ಪ. ನೀಡಿ ಅವರನ್ನು ಗೌರವಿಸಿದೆ. ವಿದ್ಯಾರ್ಥಿಗಳು-ಅಭಿಮಾನಿಗಳು ಆರ್.ಸಿ. ಅವರಿಗೆ 50 ತುಂಬಿದಾಗ 'ಬೆಳ್ಗೊಲ' ಅಭಿನಂದನ ಗ್ರಂಥ ಸಮರ್ಪಿಸಿ ಗೌರವ ಸಲ್ಲಿಸಿದ್ದಾರೆ (1981).

1995ರಲ್ಲಿ 'ಚಿದಾನಂದ ಪ್ರಶಸ್ತಿ' ಕೂಡ ಪಡೆದಿದ್ದಾರೆ. ಕ.ಅ. ಪೀಠದಲ್ಲಿ ಹಿರೇಮಠ ವ್ಯಾಖ್ಯಾನಮಾಲೆಯನ್ನು ಆರಂಭಿಸಿ ಅವರಿಗೆ ಗೌರವ ನೀಡಲಾಗಿದೆ. ಕನ್ನಡ ಅಧ್ಯಯನ ಪೀಠದ ಶಿಲ್ಪಿಯಾದ ಆರ್.ಸಿ. ಅವರ ಹೆಸರು ಚಿರಕಾಲ ಉಳಿಯಬೇಕೆನ್ನುವ ಸದುದ್ದೇಶದಿಂದ ಕ.ವಿ.ವಿ. ಕನ್ನಡ ಅಧ್ಯಯನ ಪೀಠಕ್ಕೆ ಡಾ। ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠವೆಂದು ನಾಮಕರಣ ಮಾಡಿ, ಅವರನ್ನು ಹೃದಯಪೂರ್ವಕ ಸ್ಮರಿಸಲಾಗಿದೆ, ಗೌರವಿಸಲಾಗಿದೆ. ಹೀಗೆ ಹತ್ತು ಹಲವು ಪ್ರಶಸ್ತಿ, ಸ್ಥಾನಮಾನದ ಗೌರವವನ್ನು ಮುಡಿಗೇರಿಸಿಕೊಂಡ ಡಾ। ಆರ್.ಸಿ. ಹಿರೇಮಠ ಅವರು ಚಿರಸ್ಮರಣೀಯರಾಗಿದ್ದಾರೆ.

ಕೊನೆಯಲ್ಲಿ ಎರಡು ಮಾತು

ಹಾಗೆ ನೋಡಿದರೆ, ವೈಯಕ್ತಿಕ ನೆಲೆಯಲ್ಲಿ ಡಾ। ಆರ್.ಸಿ. ಹಿರೇಮಠ ಅವರ ಜಾನಪದ ದುಡಿಮೆ-ಕೊಡುಗೆ ಬಹಳ ಇಲ್ಲ. ಆದರೆ ಅವರು ಹುಟ್ಟುಹಾಕಿದ ಜಾನಪದ ಕಾರ್ಯಯೋಜನೆಗಳು ಕ್ರಿಯಾಶೀಲವಾಗಿ ಅವರ ಶಿಷ್ಯ-ಪ್ರಶಿಷ್ಯರಿಂದ ಜನಪದ ಸಾಹಿತ್ಯಾಧ್ಯಯನವನ್ನು ಉತ್ತರ ಕರ್ನಾಟಕದಲ್ಲಿ ಮುಂದುವರಿಸಿವೆ. ಬಾಲ್ಯದ್ರಿಂದಲೂ ಸ್ವಯಂನಿರ್ಮಿತ ವ್ಯಕ್ತಿತ್ವವನ್ನು ರೂಪಿಸಿಕೊಂಡ ಆರ್.ಸಿ. ಅವರು ಬರಬರುತ್ತ ಸಾಂಸ್ಥಿಕವಾಗಿ ಜಾನಪದ ಪರಿಸರವನ್ನು ಬೆಳಗಿಸಿದ, ಜಾನಪದಲೋಕದ ಪ್ರಾತಃಸ್ಮರಣೀಯರಾಗಿದ್ದಾರೆ.

* * *

ವಿಶ್ವವಿದ್ಯಾಲಯ ಮಟ್ಟದಲ್ಲಿ ಜಾನಪದಕ್ಕೆ ಗಟ್ಟಿಯಾದ ಸಾಂಸ್ಥಿಕತೆಯನ್ನು ತಂದುಕೊಟ್ಟವರಲ್ಲಿ ಖ್ಯಾತ ವಿದ್ವಾಂಸರಾದ ಆರ್. ಸಿ. ಹಿರೇಮತ ಪ್ರಮುಖರು. ತಮ್ಮ ಅಧಿಕಾರದ ಅವಧಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ, ಉತ್ತರ ಕರ್ನಾಟಕ ಭಾಗದಲ್ಲಿ, ಜಾನಪದ ಅಧ್ಯಯನಕ್ಕೆ ವ್ಯಾಪಕವಾದ ಚಾಲನೆ ನೀಡಿದರು. ತಾವೂ ಸಕ್ರಿಯವಾಗಿ ಪಾಲ್ಗೊಂಡಿದ್ದಲ್ಲದೆ, ಹಲವರು ಉತ್ಸಾಹದಿಂದ ಪಾಲ್ಗೊಳ್ಳುವಂತೆ ಮಾಡಿದರು. ಜಾನಪದ ಕ್ಷೇತ್ರದಲ್ಲಿ ಹೊಸಹೊಳಹುಗಳ ಹಿನ್ನೆಲೆಯಲ್ಲಿ ದುಡಿಯುವ ಪಡೆಯನ್ನು ತಯಾರುಮಾಡಿದರು. ಸಂಶೋಧನೆ, ಗ್ರಂಥಸಂಪಾದನೆಯ ಜೊತೆಗೆ ಜಾನಪದವನ್ನು ತಮ್ಮ ಪಾಂಡಿತ್ಯದ ಪರಿಧಿಗೆ ದುಡಿಸಿಕೊಂಡಿದ್ದು ವಿಶೇಷ.

ಡಾ. ಆರ್. ಸಿ. ಹಿರೇಮತರ ಬದುಕು ಸಾಧನೆಯನ್ನು ಹತ್ತಿರದಿಂದ ಬಲ್ಲಂತಹ ಡಾ. ಸಿ. ಕೆ. ನಾವಲಗಿಯವರು, ಆತ್ಮೀಯವಾಗಿ ಡಾ. ಹಿರೇಮತರ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ಬೆಂಗಳೂರು